# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
75,000
HAMPI TIMES E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 22 Issue: 22 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 16.07.2024 16.07.2024 • ಮಂಗಳವಾರ Tuesday • ಪುಟ:04 Page:04 • ಬೆಲೆ:2 Rs:2



ಹಂಪಿ ಟೈಮ್ಸ್ ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಅಗತ್ಯ ಮಾಹಿತಿ ಅಧಿಕಾರಿಗಳ ಅಂಗೈಯಲ್ಲಿರಲಿ : ಡಿಸಿ ದಿವಾಕರ

## ಅಧಿಕಾರಿಗಳಿಗೆ ಡಿಸಿ ಎಚ್ಚರಿಕೆ। ಕರ್ತವ್ಯಲೋಪ ಎಸಗಿದರೆ ಶಿಸ್ತು ಕ್ರಮ ನಿಶ್ಚಿತ। ಕಡತಗಳ ವಿಲೇವಾರಿ ಚುರುಕಾಗಲಿ



**ಹಂಪಿ ಟೈಮ್ಸ್ ಹೊಸಪೇಟೆ**
ಸರ್ಕಾರದ ಪ್ರತಿಯೊಂದು ಯೋಜನೆಗಳ ಅನುಷ್ಠಾನದ ಮಹತ್ವದ ಹೊಣೆಗಾರಿಕೆಯನ್ನು ಹೊಂದಿರುವ ಅಧಿಕಾರಿಗಳು ಮೈಚಳಿ ಬಿಟ್ಟು ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು, ನಿರ್ಲಕ್ಷ್ಯ, ಉದಾಸೀನ ಕಂಡುಬಂದಲ್ಲಿ ಯಾವುದೇ ಮುಲಾಜಿಲ್ಲದೇ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ ಖಡಕ್ ಸೂಚನೆ ನೀಡಿದರು.

ನಗರದ ಜಿಲ್ಲಾಡಳಿತ ಭವನದಲ್ಲಿ ಸೋಮವಾರ ಜಿಲ್ಲಾಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದರು. ಸಿಎಂ ಸಭೆಯಲ್ಲಿ ತಿಳಿಸಿದಂತೆ ಕಾರ್ಯಪ್ರವೃತ್ತರಾಗಲು ಪ್ರತಿಯೊಂದು ಇಲಾಖೆಯ ಅಧಿಕಾರಿಗಳ ಸಹಕಾರ, ಸಮನ್ವಯ ಅತೀ ಅವಶ್ಯಕವಾಗಿದೆ. ಅಧಿಕಾರಿಗಳು ಸಹ ಜನಪ್ರತಿನಿಧಿಗಳ ಹಾಗೆ ಜನ ಸೇವಕರು ಎಂಬುದಾಗಿ ತಿಳಿಯಬೇಕು. ಕಾರ್ಯಾಂಗ ಮತ್ತು ಶಾಸಕಾಂಗ ಈಗ ಮತ್ತಷ್ಟು ಗುಣಾತ್ಮಕವಾಗಿ ಕಾರ್ಯ ನಿರ್ವಹಿಸಬೇಕು. ಯಾವುದೇ ಮಾಹಿತಿಯು ಅಧಿಕಾರಿಗಳ ಅಂಗೈಯಲ್ಲಿರುವಂತೆ ಮಾಹಿತಿಯೊಂದಿಗೆ ಕೆಲಸ ಮಾಡಬೇಕು ಎಂಬುದಾಗಿ ಸಭೆಯಲ್ಲಿ ಮುಖ್ಯಮಂತ್ರಿಗಳು ಡಿಸಿ, ಸಿಇಒ ಕಾರ್ಯವೈಖರಿಯ ಬಗ್ಗೆ ತಿಳಿಸಿದ್ದಾರೆ. ಅದರಂತೆ ಎಲ್ಲ ಅಧಿಕಾರಿಗಳು ಸಹ ಗುಣಾತ್ಮಕವಾಗಿ ಕಾರ್ಯನಿರ್ವಹಿಸಿ ಜಿಲ್ಲಾಡಳಿತಕ್ಕೆ ಮತ್ತಷ್ಟು ಬಲ ತುಂಬಬೇಕಿದೆ ಎಂದು ಆಯಾ ಇಲಾಖೆಯ ಅಧಿಕಾರಿಗಳ ಹೊಣೆಗಾರಿಕೆಯ ಬಗ್ಗೆ ವಿವರಿಸಿದರು.

ಸರ್ಕಾರದ ಆದೇಶ ಪಾಲಿಸದಿದ್ದಲ್ಲಿ, ಕಡತ ವಿಲೇವಾರಿ ಮಾಡದೇ ಜನರಿಗೆ ಸ್ಪಂದಿಸದೇ ಇರುವುದು ಕಂಡು ಬಂದಲ್ಲಿ, ಹೇಳುವ ಯಾವುದೇ ಕೆಲಸದ ಬಗ್ಗೆ ಉದಾಸೀನ ಮಾಡುವುದು, ನಿರ್ಲಕ್ಷ್ಯ ಮಾಡುವುದು ತಿಳಿದು ಬಂದಲ್ಲಿ, ಮೇಲಿಂದ ಮೇಲೆ ಕರ್ತವ್ಯಲೋಪ ಎಸಗುವುದು ಸಾಬೀತಾದಲ್ಲಿ ಯಾವುದೇ ಮುಲಾಜಿಲ್ಲದೇ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಉತ್ತಮವಾಗಿ ಕಾರ್ಯ ಮಾಡುವುದರ ಮೂಲಕ ಸಾರ್ವಜನಿಕರು ತಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ಬಡವರು ಕೃಷಿ ಕಾರ್ಮಿಕರು ನೊಂದವರ ಬಗ್ಗೆ ಅನುಕಂಪ, ಅಂತಃಕರಣವಿಟ್ಟುಕೊಂಡು ಕೆಲಸ ನಿರ್ವಹಿಸಬೇಕು. ಅರ್ಜಿದಾರರು ಅನವಶ್ಯಕವಾಗಿ ಕಚೇರಿಗೆ ಅಲೆಯುವಂತೆ ಮಾಡಬಾರದು. ಸಮಯಕ್ಕೆ ಸರಿಯಾಗಿ ಕಚೇರಿಗೆ ಬರುವುದು, ನಿಯಮಾನುಸಾರ ಕಾಲಮಿತಿಯೊಳಗೆ ಕಡತ ವಿಲೇವಾರಿಯಂತಹ ಕಾರ್ಯಗಳ ಮೂಲಕ ಅಧಿಕಾರಿಗಳು ತಮ್ಮ ಕಚೇರಿಯಲ್ಲಿನ ಸಿಬ್ಬಂದಿಗೆ ಮಾದರಿಯಾಗುವಂತೆ ಕಾರ್ಯನಿರ್ವಹಿಸಬೇಕು ಎಂದು ಸಲಹೆ ಮಾಡಿದರು.

ಜಿಲ್ಲೆಗೆ ಹೊಸದಾಗಿ ಬರುವ ಅಧಿಕಾರಿಗಳು, ಜಿಲ್ಲೆಯ ಸಾಕ್ಷರತಾ ಪ್ರಮಾಣ, ಶಿಕ್ಷಣ ಮತ್ತು ತಲಾ ಆದಾಯ ಸೇರಿದಂತೆ ಜಿಲ್ಲೆಯ ಸಾಮಾಜಿಕ, ಆರ್ಥಿಕ, ಔದ್ಯೋಗಿಕ ಸ್ಥಿತಿಗತಿಗಳ ಬಗ್ಗೆ ತಿಳಿದುಕೊಂಡಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬಹುದಾಗಿದೆ. ಕಡತಗಳ ವಿಲೇವಾರಿಯನ್ನು ಅತ್ಯಂತ >>3

# ಹಂಪಿ ಪರಿಸರದಲ್ಲಿ ವಚನ ಸಾಹಿತ್ಯಕ್ಕೆ ಪುನರುಜ್ಜೀವನ

## ಕಾಯಕ ಪ್ರಜ್ಞೆಗಾಗಿ ಹುಟ್ಟಿಕೊಂಡಿದ್ದೇ ಶರಣ ಧರ್ಮ ಸಂಡೂರು ವಿರಕ್ತ ಮಠದ ಪ್ರಭುಸ್ವಾಮಿಗಳ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ಯಾವ ಕಾಯಕವಾದರೂ ಮಾಡು, ಸ್ವಕಾಯಕವ ಮಾಡು, ಮಾಡುವ ಕಾಯಕವನ್ನು ಸತ್ಯ ನಿಷ್ಠೆಯಿಂದ ಮಾಡಿ ನಿಷ್ಕಾಮ ದಾಸೋಹ ಮಾಡುವ ಸಂಕಲ್ಪದೊಂದಿಗೆ ಶರಣ ಧರ್ಮ ಹುಟ್ಟಿಕೊಂಡಿತು ಎಂದು ಸಂಡೂರು ಪ್ರಭುಸ್ವಾಮಿಗಳ ವಿರಕ್ತ ಮಠದ ಪ್ರಭುಸ್ವಾಮಿಗಳು ಅಭಿಪ್ರಾಯಪಟ್ಟರು.

ವಿಜಯನಗರ ಸಾಮ್ರಾಜ್ಯದ ಪ್ರದೇಶಗಳ ಬಸವಪರ ಸಂಘಟನೆಗಳು ಹಂಪಿಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಗುರು ಬಸವಣ್ಣನವರ ಸಂಸ್ಮರಣೋತ್ಸವದಲ್ಲಿ ಆಶೀರ್ವಚನ ನೀಡಿದರು. ವಚನ ಸಾಹಿತ್ಯ ಪುನರುಜ್ಜೀವನ ಕಂಡ ಹಂಪಿ ಪರಿಸರದಲ್ಲಿ ಕಾಯಕ ಜೀವಿಗಳಿಗಾಗಿಯೇ ಧರ್ಮ ಸ್ಥಾಪಿಸಿದ ಬಸವಣ್ಣನ ಸಂಸ್ಮರಣೋತ್ಸವ ಅತ್ಯಂತ ಔಚಿತ್ಯಪೂರ್ಣ ಎಂದರು.

ಪ್ರಾಧ್ಯಾಪಕ ಬಸವರಾಜ ತಾವರಗೊಂದಿ ಪ್ರಾಸ್ತಾವಿಕವಾಗಿ ಮಾತಾಡಿ, ಕಲ್ಯಾಣದ ವಿಪ್ಲವದ ನಂತರ ಹಡಪದ ಲಿಂಗಮ್ಮತಾಯಿ, ಅಕ್ಕ ನಾಗಮ್ಮ, ಚನ್ನಬಸವಣ್ಣ ನಂತಹ ಶರಣರು ಹೇಗೆ ಹಂಪಿಯ ಪರಿಸರಕ್ಕೆ ಬಂದರ ಎನ್ನುವುದನ್ನು ತಿಳಿಸಿಕೊಟ್ಟರು. ಅವರುಗಳು ಹಂಪೆಯ ಪರಿಸರದಲ್ಲಿ ವಚನ ಸಾಹಿತ್ಯ ಮತ್ತು ಶರಣ ಧರ್ಮ ಪ್ರಸಾರ ಮಾಡಿದ ಕಾರಣಕ್ಕೆ ವಿಜಯನಗರ ವಚನ ಸಾಹಿತ್ಯ ಸಂಕಲನಕ್ಕೆ ವೇದಿಕೆಯಾಯಿತು. ಬಸವ ಕಲ್ಯಾಣದಲ್ಲಿ ಆರಂಭವಾದ ಕ್ರಾಂತಿ ಹಂಪಿಯಲ್ಲಿ ವಿಜಯಕಲ್ಯಾಣವಾಗಿ ರೂಪಾಂತರ ಗೊಂಡಿತು ಎಂದರು.

ಕನ್ನಡ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ಕೆ ರವೀಂದ್ರನಾಥ ಬಸವ ಧರ್ಮದ ಐದು ಕಲ್ಯಾಣಗಳನ್ನು ಪರಿಚಯಿಸಿದರು. ಶಹಾಪುರದ ಬಸವ ಮಾರ್ಗ ಪತ್ರಿಕೆಯ ಸಂಪಾದಕ ವಿಶ್ವಾರಾಧ್ಯ ಸತ್ಯಂಪೇಟ ಮಾತನಾಡಿ, ಬಸವಧರ್ಮ >>4

## ಮೈಕ್ರೋ ನ್ಯೂಸ್

### ಇಂದು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ಶಿವಾನುಭವ ಸಂಪದ

**ಹಂಪಿ ಟೈಮ್ಸ್ ಹೊಸಪೇಟೆ**
ನಗರದ ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠದಲ್ಲಿ ಜು.16 ರಂದು ಸಂಜೆ 7ಕ್ಕೆ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಸಹಯೋಗದೊಂದಿಗೆ 1163ನೇ ಶಿವಾನುಭವ ಸಂಪದ ಜರುಗಲಿದೆ.



ಜಗದ್ಗುರು ಕೊಟ್ಟೂರು ಬಸವಲಿಂಗ ಮಹಾ ಸ್ವಾಮಿಗಳು ಸಾನ್ನಿಧ್ಯ ವಹಿಸುವರು. ನಿವೃತ್ತ ಪ್ರಾಧ್ಯಾಪಕ ಡಾ.ಹೆಚ್.ಎಂ.ಚಂದ್ರಶೇಖರಶಾಸ್ತ್ರಿ ಅವರು ವಚನಪಿತಾಮಹ ಫ.ಗು.ಹಳಕಟ್ಟಿ ಜೀವನ-ಸಾಧನೆ ಕುರಿತು ಉಪನ್ಯಾಸ ನೀಡುವರು. ಇದೇ ಸಂದರ್ಭದಲ್ಲಿ ಶ್ರೀ ಕೊಟ್ಟೂರುಸ್ವಾಮಿ ಕಲ್ಯಾಣ ಕೇಂದ್ರ(ರಿ)ದ ಪ್ರಧಾನ ಕಾರ್ಯದರ್ಶಿ ಸಾಲಿಸಿದ್ದಯ್ಯನವರಿಗೆ 75ನೇ ವರ್ಷದ ಜನ್ಮದಿನದ ಗೌರವಪೂರ್ವಕ ಸನ್ಮಾನ ನಡೆಯಲಿದೆ. ಗೌರವಾನ್ವಿತ ಅತಿಥಿಗಳಾಗಿ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಅಧ್ಯಕ್ಷ ಡಾ.ಕೆ. ರವೀಂದ್ರನಾಥ, ಹೋಟೆಲ್ ಉದ್ಯಮಿ ಬಿ. ಎನ್.ಕಮಲಾಕ್ಷ ಶಾನಭಾಗ, ಜೇಸಿಸ್ ಆಂಗ್ಲಮಾಧ್ಯಮ ಶಾಲೆಯ ಚೇರಮನ್ ಡಾ.ಕೆ.ಹೆಚ್. ಗುರುಬಸವರಾಜ ಉಪಸ್ಥಿತರಿರಲಿದ್ದಾರೆ. ಭಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಬೇಕೆಂದು ಶ್ರೀ ಜಗದ್ಗುರು ಕೊಟ್ಟೂರುಸ್ವಾಮಿ ಸಂಸ್ಥಾನ ಮಠ ತಿಳಿಸಿದೆ.

### ಊರಿಗೆ ಬಂದ ಕರಡಿ ಸೆರೆ ಹಿಡಿದು ಅರಣ್ಯಕ್ಕೆ ಬಿಟ್ಟ ಅಧಿಕಾರಿಗಳು

**ಹಂಪಿ ಟೈಮ್ಸ್ ಹೊಸಪೇಟೆ**
ಹೊಸಪೇಟೆ ತಾಲೂಕಿನ ಮಲಪನಗುಡಿ ಹತ್ತಿರದ ದೇವಾಲಯವೊಂದರ ಬಳಿಯಲ್ಲಿ ಜುಲೈ 14 ರಾತ್ರಿ ವೇಳೆ ಕಾಣಿಸಿಕೊಂಡಿದ್ದ ಕರಡಿಯನ್ನು ಸೆರೆ ಹಿಡಿದು ಬಳಿಕ ಕಾಡಿಗೆ ಬಿಡಲಾಗಿದೆ. ಆದ್ದರಿಂದ ಸಾರ್ವಜನಿಕರು ಆತಂಕಪಡಬಾರದು ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

### ಬಂಗಾರ ಒಡವೆಗಳನ್ನ ವಾರಸುದಾರರಿಗೆ ಮರಳಿಸಿದ ಸಾರಿಗೆ ಸಿಬ್ಬಂದಿ



**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಪಟ್ಟಣದ ಬಸ್ ಡಿಪೋಗೆ ಸೇರಿದ ಬಸ್ಸೊಂದರಲ್ಲಿ ಪ್ರಯಾಣಿಕರೊಬ್ಬರು ಚಿನ್ನದ ಒಡವೆಗಳುಳ್ಳ ಬ್ಯಾಗ್‌ನ್ನು ಮರೆತು ಬಸ್ನಲ್ಲೆ ಬಿಟ್ಟು, ಬಸ್ಸಿಳಿದು ಮನೆಗೆ ಹೋಗಿದ್ದರು. ಸಾರಿಗೆ ನೌಕರರ ಪ್ರಾಮಾಣಿಕತೆಯಿಂದಾಗಿ 2.80 ಲಕ್ಷ ಮೌಲ್ಯದ ಚಿನ್ನದಭರಣಗಳನ್ನು ವಾರಸುದಾರರ ಕೈಗೆ ನೀಡಿರುವ ಸಾರಿಗೆ ನೌಕರರ ಕಾರ್ಯಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಹಿನ್ನೆಲೆ: ಹಗರಿಬೊಮ್ಮನಹಳ್ಳಿ ಡಿಪೋಗೆ ಸೇರಿದ ಸಾರಿಗೆ ಬಸ್ ಹೊಸಪೇಟೆಯಿಂದ ಇಲ್ಲಿಗೆ ಭಾನುವಾರ ಸಂಜೆ ಬಂದಿದೆ. ಅದರಲ್ಲಿ ಪ್ರಯಾಣ ಮಾಡಿದ ಮೈಮುನ್ನಿಸಾ ಬೇಗಂ ಎನ್ನುವ ಅಜ್ಜಿಯು ಬಂಗಾರ ಮತ್ತು ಬೆಳ್ಳಿ ಆಭರಣಗಳು, ಅಲ್ಪ ಮೊತ್ತ ಹಾಗೂ ಗುರುತಿನ ಚೀಟಿಯನ್ನೊಂದಿದ್ದ ಬ್ಯಾಗೊಂದನ್ನು ಬಸ್‌ನ ಸೀಟಿನಲ್ಲಿಟ್ಟು, ಬಸ್ ಇಳಿಯುವಾಗ ಮರೆತು ಮನೆಗೆ ಹೋಗಿದ್ದಾರೆ. ಈ ವೇಳೆ ಅಧಿಕಾರಿಗಳಾದ ಸೇವಾನಾಯ್ಕ್, ಮಂಜುನಾಥ, ಸಮಾಜ ಸೇವಕ ಸಂಚಿ ಶಿವಕುಮಾರ್, ವಾರಸುದಾರರಾದ ಶಿಕ್ಷಕ ಮುಸ್ತಾಕ್ ಅಹ್ಮದ್, ಯುವಕ ಗುಲ್ಜರ್ ಅಹ್ಮದ್ ಮತ್ತು ಘಟಕದ ಸಿಬ್ಬಂದಿಯವರು ಇದ್ದರು.


# ನಿರ್ಧಾರ ನಿಮ್ಮದು

## ಸಾಧನೆಗೆ ಬೇಕಿರುವುದೇನು?

ಯಾವ ಶಾಲೆ ಸೇರಿಸಬೇಕು? ಯಾವ ಶಾಲೆ ಚನ್ನಾಗಿದೆ? ನಮ್ಮ ಮಕ್ಕಳು ಚನ್ನಾಗಿ ಓದಿ ಅದಾಗಬೇಕು ಇದಾಗಬೇಕು.. ಹೀಗಾಗಬೇಕು, ಹಾಗಾಗಬೇಕು. ಅವರಂತಾಗಬೇಕು ಇವರಂತಾಗಬೇಕು.. ಇವೆಲ್ಲವೂ ಬರೀ ಪ್ರಶ್ನೆಗಳಲ್ಲ. ವಿಚಿತ್ರ ಪ್ರಶ್ನೆಗಳು..ಈ ಪ್ರಶ್ನೆಗಳು ನಮ್ಮನ್ನು ಗುರಿಯತ್ತ ಕೊಂಡೊಯ್ಯಲಾರವು.. ನಮಗೆ ಬೀದಿ ದೀಪದ ಕೆಳಗೆ ಓದಿದ ಸರ್ ಎಂ ವಿ ಆದರ್ಶಪ್ರಾಯವಾದರೆ ಮತ್ತೊಂದು ಕಡೆ



ಜೀವಂತ ಉದಾಹರಣೆಗಳು ಸಹಿತ ಆದರ್ಶಪ್ರಾಯವಾಗಬೇಕು.. ಚಹಾ ಮಾರುವವನ ಮಗಳು ಐಎಎಸ್, ಆಟೋದವನ ಮಗ ಐಎಎಸ್ ಹೀಗೆ ಹತ್ತು ಹಲವು ವರದಿಗಳನ್ನು ನಾವು ಪತ್ರಿಕೆ ಗಳಲ್ಲಿ, ಮಿಡಿಯಾಗಳಲ್ಲಿ ನೋಡುತ್ತೇವೆ. ಅವರ ಯಶಸ್ಸಿಗೆ ಕಾರಣಗಳೇನು? ಅವರು ಯಾವ ಟ್ಯೂಷನ್ ಗೂ ಹೋಗಿಲ್ಲ, ಅನೇಕಾನೇಕ ಸೋರ್ಸ್ ಬುಕ್ ಕೊಂಡು ಓದುವಷ್ಟು, ಟ್ಯುಟೋರಿಯಲ್ ಗಳಲ್ಲಿ ಕೋಚಿಂಗ್ ಪಡೆಯುವಷ್ಟು ಸ್ಥಿತಿವಂತರೂ ಅಲ್ಲ.. ಅವರ ಮನೆಯಲ್ಲಿ ಕಲಿಕೆಗೆ ಪೂರಕವಾದ ಯಾವ ವಾತಾವರಣವೂ ಇಲ್ಲ.. ಅದು ಹೇಗೆ ಸಾಧಿಸಿದರು..? ಅವರು ಸಾಧಿಸಲು ಪ್ರಮುಖವಾಗಿ ಕಾರಣವಾದವುಗಳು ಅವರ ಸ್ಥಿತಿ, ಅವರ ಆರ್ಥಿಕ, ಸಾಮಾಜಿಕ ಸ್ಥಿತಿ, ಅವರು ಅವಮಾನಕ್ಕೊಳಗಾದ, ಕಡೆಗಣಿಸಲ್ಪಟ್ಟ ಸ್ಥಿತಿಗತಿಗಳು,ಅವರ ಪಾಲಕ ಪೋಷಕರು ತಮಗಾಗಿ ದಿನ ನಿತ್ಯವೂ ಪಡುತ್ತಿರುವ ಶ್ರಮ ಅವರ ಮನದಾಳಕ್ಕಿಳಿದಿರುತ್ತದೆ..



ಪರಿಸ್ಥಿತಿಗಳು ಹೀಗಿದ್ದಾಗ ಸಹಜವಾಗಿ ಅವರಲ್ಲಿ ಸಾಧಿಸಬೇಕು, ನಾನು ಗೆಲ್ಲಬೇಕು, ನಾನು ಗೆದ್ದೇತಿರುತ್ತೇನೆಂಬ ಛಲ ಮೂಡುತ್ತದೆ. ನಾನು ಚನ್ನಾಗಿ ಓದಿ ಒಂದು ಸ್ಥಾನಕ್ಕೇರಬೇಕು. ಅಪ್ಪ ಅಮ್ಮ ಇಲ್ಲಿಯವರೆಗೆ ದುಡಿದದ್ದು ಸಾಕು, ಇನ್ನು ಮುಂದೆ ನಾನು ದುಡಿದು ಅವರುಗಳನ್ನು ಚನ್ನಾಗಿ ನೋಡಿಕೊಳ್ಳಬೇಕು.. ಹೀಗೆ ಇವೆಲ್ಲವೂ ಸಹಜವಾಗಿ ಮನದಲ್ಲಿ ಉದ್ಭವವಾಗುತ್ತವೆ.. ಅವನ ಮನಸ್ಸು ಸಾಧನೆಯನ್ನು ಬಿಟ್ಟು ಬೇರೇನನ್ನೂ ಯೋಚಿಸುವುದಿಲ್ಲ.. ಅವಮಾನ, ಬಡತನ, ಮನೆಯ ದುಸ್ಥಿತಿ ಇವೆಲ್ಲವೂ ಸಾಧನೆಗೆ ಬೀಜಗಳು.. ಇದನ್ನು ಐನ್‌ಸ್ಟೈನ್ ರವರು ಕೇವಲ ಮೂರೇ ಶಬ್ದಗಳಲ್ಲಿ ಹೇಳುತ್ತಾರೆ **"ಮನಸ್ಸು ಮಾಡು, ಕರ್ತವ್ಯ ನಿಷ್ಟನಾಗು, ಕಾದು ನೋಡು"**. ಇವು ಅಮೃತ ಸಮಾನವಾದ ಮಾತುಗಳು.. ಮನಸ್ಸು ಮಾಡದೇ ಯಾವ ಕಾರ್ಯಗಳು ಸಹ ಸಿದ್ಧಿಯಾಗುವುದಿಲ್ಲ. ಬಲವಂತದಿಂದ ಕಾಯಿಯನ್ನು ಹಿಸುಕಿದರೆ ಹಣ್ಣಾಗುವುದಿಲ್ಲ, ಮೆತ್ತಗಾಗುತ್ತದೆ ಅಷ್ಟೇ.. ಸಾಧಿಸಬೇಕೆಂಬ ಉತ್ಕಟೇಚ್ಛೆ ಉಳ್ಳವರು ಎಂತಹ ಪ್ರಬಲರಿಗೂ ಸೆಡ್ಡು ಹೊಡೆದು ನಿಲ್ಲುತ್ತಾರೆ.. ವಿದ್ಯಾರ್ಥಿಗಳ ಮನದಲ್ಲಿ ಈ ರೀತಿಯ ತೀರ್ಮಾನಗಳು ಬರಬೇಕು. ನಿನಗೆ ಎಲ್ಲಾ ಸೌಲಭ್ಯ ಕೊಟ್ಟಿದ್ದೇವೆ ಓದು ಎನ್ನುವ ಬಲವಂತದ ಸೊಲ್ಲು ಬಹಳ ಅಪಾಯಕಾರಿ.. ಮಕ್ಕಳನ್ನು ಯಂತ್ರದಂತೆ ನೋಡಬಾರದು.. ಮೊದಲು ಮಕ್ಕಳನ್ನು ಪಾಲಕ ಪೋಷಕರು ಪ್ರೀತಿಸಬೇಕು. ಪದೇ ಪದೇ ದೂಷಣೆ ಮಾಡಿ ಅವರ ಮನೋಬಲವನ್ನು ಕುಗ್ಗಿಸಬಾರದು, ಇತರೆ ವಿದ್ಯಾರ್ಥಿಗಳಿಗೆ ತುಲನೆ ಅಥವಾ ಕಂಪೇರ್ ಮಾಡಿ ಹೀಯಾಳಿಸಬಾರದು.. ನಾನಿದ್ದೇನೆ ಮಗಾ, ನಾನಿದ್ದೇನೆ ಮಗಳೇ ಸಾಧಿಸು, ನಿನಗೆ ಆ ಶಕ್ತಿ ಇದೆ ಎನ್ನುವಂತಹ ಮನೋಬಲದ ಅಗತ್ಯತೆ ವಿದ್ಯಾರ್ಥಿಗಳಿಗೆ ಬೇಕಿದೆ.

ಇಪ್ಪತ್ನಾಲ್ಕು ಗಂಟೆ ಓದು ಓದು ಅಂತ ಹಿಂಸೆ ಮಾಡುವ ಪಾಲಕರಿದ್ದಾರೆ..ಇದನ್ನು ಮೊದಲು ಬಿಡಬೇಕು..ಆ ವಿದ್ಯಾರ್ಥಿ ಯಂತ್ರವಲ್ಲ. ಅದಕ್ಕೂ ಒಂದು ಮನಸಿದೆ, ಭಾವನೆಗಳಿವೆ ಅಲ್ಲವೇ..ಅವರಿಗೂ ಸ್ವಲ್ಪ ಸ್ವತಂತ್ರ, ಖಾಸಗಿ ಸಮಯ ಬೇಡವೇ? ಪಾಲಕ ಪೋಷಕರು ನೀಡುವ ಮನೋಬಲ ,ಶಾಲೆಯಲ್ಲಿನ ಉತ್ತಮ ಬೋಧನೆ ಯಶಸ್ಸಿಗೆ ಕಾರಣವಾಗುತ್ತದೆ. ಶಾಲೆಗಳಲ್ಲಿ ಮಿಲಿಟರಿ ವಾತಾವರಣ ಇದ್ದರೆ ಮಕ್ಕಳು ಕಲಿಯುವುದರ ಜೊತೆ ಮಾನಸಿಕ ಆಗುತ್ತವೆ..ಮಕ್ಕಳಿಗೆ ಕಲಿಕಾ ಸ್ವಾತಂತ್ರ್ಯ ಅಗತ್ಯ, ಶಿಕ್ಷಕರು ಪಾಲಕ ಪೋಷಕರು ನೀಡುವ ಮನೋಬಲ ಅತಿ ಅಗತ್ಯ


– ಮಲ್ಲಿಕಾರ್ಜುನ ಸ್ವಾಮಿ (ಮಹಿಮ)
ವಿಶ್ರಾಂತ ಉಪನಿರ್ದೇಶಕ, ರಾಯಚೂರು


# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಟನಾಗು – ಕಾದು ನೋಡು

SCAN & READ E-PAPER

SSLC KANNADA Hampi Times Margadarshi

## ವಿಷಯ : ಪ್ರಥಮ ಭಾಷೆ ಕನ್ನಡ

## ಪದ್ಯ-1 ಸಂಕಲ್ಪ ಗೀತೆ

**ಉ) ಕೊಟ್ಟಿರುವ ಪ್ರಶ್ನೆಗಳಿಗೆ 8– 10 ವಾಕ್ಯಗಳಲ್ಲಿ ಉತ್ತರಿಸಿರಿ.**

**1) ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯವಾಗಿದೆ? (ಜೂನ್–2017, ಜೂನ್–2018 , ಮಾರ್ಚ್–2019)**

ಉತ್ತರ: ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು ಹಚ್ಚಬೇಕು. ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುತ್ತಿರುವ ಬದುಕೆಂಬ ಹಡಗನ್ನು ಎಚ್ಚರದಲಿ ಮುನ್ನಡೆಸಬೇಕು. ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದಿ ಜಲಗಳಿಗೆ ಶುದ್ಧಿ ಕರಿಸುವ ಮುಂಗಾರಿನ ಮಳೆ ಆಗಬೇಕು. ಬರಡಾಗಿರುವ ಕಾಡುಮೇಡುಗಳು ಹಚ್ಚ ಹಸಿರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತ ಕಾಲವಾಗಬೇಕು. ಅತ್ಯಾಚಾರ, ಅನಾಚಾ ಭ್ರಷ್ಟಾಚಾರ, ಅಸ್ಪೃಶ್ಯತೆ, ಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳನ್ನು ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ ಧರ್ಮಗಳ ಬೇಧ ಭಾವದಿಂದ ಮನುಜ ಮನುಜರ ನಡುವೆ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ ಸಮಾನತೆಯ ಮನೋಭಾವವನ್ನು ಮೂಡಿಸುವ ಸೇತುವೆಯಾಗಬೇಕು, ಎಲ್ಲ ಮತಗಳು ಸಾಧನೆ ಹಾದಿಗಳು ನಮ್ಮ ಎಚ್ಚರದಲ್ಲಿ ಬದುಕುವ, ಭಯ ಸಂಶಯಗಳಿಂದ ಮುಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢ ಸಂಕಲ್ಪವನ್ನು ಕೈಗೊಳ್ಳಬೇಕು ಎಂಬುದು ಕವಿ ಜಿ.ಎಸ್. ಶಿವರುದ್ರಪ್ಪನವರ ಆಶಯವಾಗಿದೆ.

**2) ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ. (ಜೂನ್ 2017, ಜೂನ್ 2018,ಮಾರ್ಚ್ 2019)**

**ಉತ್ತರ:** ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವುದರಿಂದ ದ್ವೇಷ ರಹಿತ ಸಮಾಜ ನಿರ್ಮಾಣ ಮಾಡಬಹುದು. ಬದುಕಿನಲ್ಲಿ ಮುನ್ನಡೆಯುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ಮುಂಗಾರಿನ ಮಳೆ ಯಂತೆ ಪರಿಸರ ಸಂರಕ್ಷಿಸುವುದರಿಂದ ನದಿ ಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು. ವನ ಸಂರಕ್ಷಣೆ ಮಾಡುವುದರಿಂದ ಕಾಡುಗಳು ಹಚ್ಚಹಸುರಿನಿಂದ ಸಮೃದ್ಧ ವಾಗುವಂತೆ ಮಾಡಬಹುದು. ಹೊಸ ಭರವಸೆಯನ್ನು ಮೂಡಿಸುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ಸಮಾನ ಮನೋಭಾವನೆ ಉಳ್ಳವರಾಗುವುದರಿಂದ ಮನುಜ ಮನುಜರ ನಡುವಿನ ಅಸಮಾನತೆಯ ಅಡ್ಡ ಗೋಡೆಗಳನ್ನು ಕೆಡಬಹುದು. ಎಲ್ಲಾ ಮತಗಳು ಸಾಧನೆಯ ಹಾದಿಗಳು ಎಂಬ ಎಚ್ಚರದಲ್ಲಿ ನಾವು ಬದುಕುವುದರಿಂದ ದೇಶದಲ್ಲಿ ಶಾಂತಿಯು ನೆಲೆಯೂರುವಂತೆ ಮಾಡಬಹುದು. ಭಯ ಹಾಗೂ ಸಂಶಯಗಳಿಂದ ಮುಕ್ತವಾಗುವುದರಿಂದ ಭವಿಷ್ಯದ ಕನಸನ್ನ ಕಾಣಬಹುದು. ಹೀಗೆ ಕವಿ ಜಿ.ಎಸ್.ಎಸ್. ರವರು ಸಂಕಲ್ಪ ಮತ್ತು ಅನುಷ್ಠಾನವನ್ನು ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

**ಊ) ಕೆಳಗಿನ ಪದ್ಯ ಭಾಗವನ್ನು ಓದಿ ಅರ್ಥ ಮಾಡಿಕೊಂಡು, ಅಡಕವಾಗಿರುವ ಮೌಲ್ಯವನಾಧರಿಸಿ ಸಾರಾಂಶ ಬರೆಯಿರಿ.**

**1) ಕಲುಷಿತವಾದೀ ನದೀಜಲಗಳಿಗೆ ಮುಂಗಾರಿನ ಮಳೆ ಯಾಗೋಣ ಬರಡಾಗಿರುವೀ ಕಾಡುಮೇಡುಗಳ ವಸಂತವಾಗುತ ಮುಟ್ಟೋಣ.(ಜೂನ್ 2019)**

ಈ ನೆಲದ ಕೆರೆ ನದಿಗಳ ನೀರಿನಲ್ಲಿ ಕೊಳಕು ತುಂಬಿಕೊಂಡು ಕಲುಷಿತವಾಗಿದೆ. ಮಳೆಗಾಲ ಆರಂಭವಾಗಿ ಕೊಳಕಾದ ಹಳೆ ನೀರು ಕೊಚ್ಚಿ ಹೋಗಿ ಹೊಸ ನೀರು ತುಂಬುತ್ತದೆ. ಅಂತಹ ಮುಂಗಾರು ಮಳೆಯಂತೆ ನಾವು ಸ್ವಚ್ಛತೆಗಾಗಿ ಜಯಶೀಲರಾಗೋಣ ಬೆಟ್ಟ ಕಾಡುಗಳು ನಾಶವಾಗಲು, ಭೂಮಿ ಬರಡಾಗಲು ನಾವು ಕಾರಣವಾಗುತ್ತಿರುವ ಈ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಮರ–ಗಿಡ ಬಳ್ಳಿಗಳು ಪಡೆಯಲು ವಸಂತ ಸಮೃದ್ಧಿಯನ್ನು ಮುಟ್ಟುವ ಸಂಕಲ್ಪವನ್ನು ಮಾಡಬೇಕು.

**ಮೌಲ್ಯ:** ನಾವು ದೊಡ್ಡ ಸಂಕಲ್ಪ ದಿಂದ ಏನಾದರೂ ಸಾಧಿಸಬಹುದು ಮತ್ತು ನಮ್ಮ ಪರಿಸರವನ್ನು ಸ್ವಚ್ಛವಾಗಿಟ್ಟುಕೊಂಡು ಕಾಡುಗಳನ್ನು ಬೆಳೆಸಬೇಕು ಎಂಬುದು ಇಲ್ಲಿನ ಮೌಲ್ಯವಾಗಿದೆ.

**2) ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳ ಕಟ್ಟೋಣ ಮನುಜರ ನಡುವಣ ಅಡ್ಡಗೋಡೆಗಳ ಕೆಡವುತ ಸೇತುವೆಯಾಗೋಣ ( ಮಾರ್ಚ್–2018)**

ನಮ್ಮ ಸಮಾಜದಲ್ಲಿ ಅನೇಕ ಕಾರಣಗಳಿಂದ ಜನರು ಭಯಭೀತರಾಗಿದ್ದಾರೆ. ಆತ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ ಪರಸ್ಪರ ನಂಬಿಕೆ, ವಿಶ್ವಾಸ ವನ್ನು ಕಳೆದುಕೊಂಡಿದ್ದಾರೆ ಅಂಥವರಲ್ಲಿ ಹೊಸ ಭರವಸೆಗಳನ್ನು ತುಂಬಬೇಕಿದೆ. ಜಾತಿ, ಧರ್ಮ, ಭಾಷೆ ಮುಂತಾದ ಕಾರಣಗಳಿಂದ ಮನುಜ ಮನುಜರ ನಡುವೆ ದ್ವೇಷ ಅಸೂಯೆ ಮನೆ ಮಾಡಿದೆ ಇವುಗಳನ್ನು ನಾವು ಸಮಾನತೆ ಸ್ನೇಹ ಪ್ರೀತಿಯ ಮೂಲಕ ಅಡ್ಡಗೋಡೆಗಳನ್ನು ಕೆಡವಿ ಪರಸ್ಪರರಲ್ಲಿ ನಂಬಿಕೆ ಮೂಡಿಸುವ ಸಹ ಬಾಳ್ವಿಗೆ ಸೇತುವೆಯಾಗುವ ಸಂಕಲ್ಪ ಕೈಗೊಳ್ಳಬೇಕು.

**ಮೌಲ್ಯ:** ನಾವು ಭೇದ ಭಾವಗಳನ್ನು ಹೋಗಲಾಡಿಸಿ ಏಕತೆಯಿಂದ ಪ್ರಯತ್ನಶೀಲರಾಗಿ ಶಕ್ತಿಯುತ, ಆರೋಗ್ಯಯುತ ಸಮಾಜ ನಿರ್ಮಾಣ ಮಾಡಬೇಕೆಂಬುದು ಇಲ್ಲಿನ ಮೌಲ್ಯ ವಾಗಿದೆ.

( ಮುಂದುವರೆಯುವುದು)


www.hampitimes.com - Hampi Times Margadarshi



ಮಾರ್ಗದರ್ಶಿ ಶಿಕ್ಷಕರು : ಮಧು.ಕೆ., ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ(ತಾ), ವಿಜಯನಗರ(ಜಿ)



ಸಾಯಿಮಣಿ ಪ್ರಕಾಶನ, ಹೊಸಪೇಟೆ

## ವಿಜ್ಞಾನ

# ಈರುಳ್ಳಿ ಕತ್ತರಿಸಿದಾಗ ಕಣ್ಣೀರು ಏಕೆ ಬರುತ್ತದೆ?

■ ಆರ್.ಬಿ.ಗುರುಬಸವರಾಜ

ಅಡುಗೆ ಮನೆಯಲ್ಲಿ ಅಮ್ಮ ಕಣ್ಣೊರೆಸಿಕೊಳ್ಳುತ್ತಾ ಈರುಳ್ಳಿ ಕತ್ತರಿಸುತ್ತಿದ್ದಳು. ಅಲ್ಲಿಗೆ ಬಂದ ಭೂಮಿಕ ಅಮ್ಮ ಕಣ್ಣೊರೆಸಿಕೊಂಡದ್ದನ್ನು ನೋಡಿ ಗಾಬರಿಗೊಂಡಳು. "ಅಮ್ಮಾ, ಯಾಕಮ್ಮಾ ಅಳ್ತಾ ಇದೀಯ?" ಎಂದಳು. 'ಯಾಕೂ ಇಲ್ಲಮ್ಮ' ಎಂದಳು ತಾಯಿ. ಭೂಮಿಕ ಎಷ್ಟು ಸಲ ಕೇಳಿದರೂ ಅಮ್ಮ ಅಳುವುದೇಕೆಂದು ಹೇಳಲಿಲ್ಲ. ತಕ್ಷಣ ಭೂಮಿಕ ಹೊರಗೆ ಬಂದು ಅಪ್ಪನಿಗೆ ತಿಳಿಸಿದಳು. "ಪಪ್ಪಾ, ಅಮ್ಮ ಅಳುತ್ತಿದ್ದಾಳೆ. ನೀನು ಏನಾದ್ರೂ ಬೈದೆಯಾ?" ಎಂದಳು. 'ಇಲ್ಲಮ್ಮ ನಾನು ಬೈದಿಲ್ಲ' ಎಂದರು ತಂದೆ. ಆದರೆ ಅವರಿಗೆ ಅನುಮಾನ ಕಾಡಿತು. 'ನಿಮ್ಮಮ್ಮ ಏನು ಮಾಡ್ತಾ ಇದ್ದಾಳೆ' ಎಂದರು. "ಅಮ್ಮ ಅಳ್ತಾ ಈರುಳ್ಳಿ ಕತ್ತರಿಸುತ್ತಿದ್ದಾರೆ" ಎಂದಳು. 'ಅಯ್ಯೋ ಮಗಳೇ ಅಮ್ಮ ಅಳ್ತಿರೋದು ಈರುಳ್ಳಿ ಕತ್ತರಿಸ್ತಾ ಇರೋದಕ್ಕೆ. ಈರುಳ್ಳಿ ಕತ್ತರಿಸುವಾಗ ಕಣ್ಣಲ್ಲಿ ನೀರು ಬರುತ್ತೆ. ಅದನ್ನ ನೀನು ಅಳ್ತಾ ಇದಾಳೆ ಅಂದುಕೊಂಡಿದೀಯ ಅಷ್ಟೆ' ಎಂದರು. "ಪಪ್ಪಾ ಈರುಳ್ಳಿ ಕತ್ತರಿಸಿದ್ರೆ ಕಣ್ಣಲ್ಲಿ ನೀರು ಯಾಕೆ ಬರುತ್ತೆ?" ಎಂದಳು ಭೂಮಿಕ. ತಂದೆ ನೀಡಿದ ಉತ್ತರ ಹೀಗಿದೆ.



ಈರುಳ್ಳಿಯನ್ನು ಕತ್ತರಿಸಿದಾಗ ಅದರ ಕೋಶಗಳು ಛಿದ್ರವಾಗುತ್ತವೆ ಮತ್ತು 'ಸಿನ್-ಪ್ರೊಪನೆಥಿಯಲ್-ಎಸ್-ಆಕ್ಸೈಡ್' ಎಂಬ ಬಾಷ್ಪಶೀಲ ಸಂಯುಕ್ತವನ್ನು ಬಿಡುಗಡೆಯಾಗುತ್ತದೆ. ಈ ಸಂಯುಕ್ತವು ನಂತರ ನಮ್ಮ ಕಣ್ಣಿನಲ್ಲಿರುವ ನೀರಿನೊಂದಿಗೆ ಪ್ರತಿಕ್ರಿಯಿಸುತ್ತದೆ ಮತ್ತು ಸೌಮ್ಯವಾದ ಸಲ್ಫ್ಯೂರಿಕ್ ಆಮ್ಲವನ್ನು ಸೃಷ್ಟಿಸುತ್ತದೆ. ಈ ಆಮ್ಲವು ನಮ್ಮ ಕಣ್ಣುಗಳಲ್ಲಿನ ನರಗಳನ್ನು ಕೆರಳಿಸುತ್ತದೆ. ನರಗಳು ಮೆದುಳಿಗೆ ಏನೋ ತಪ್ಪಾಗಿದೆ ಎಂಬ ಸಂಕೇತವನ್ನು ಕಳುಹಿಸುತ್ತವೆ. ಪ್ರತಿಕ್ರಿಯೆಯಾಗಿ ಕಿರಿಕಿರಿಯನ್ನು ಹೊರಹಾಕಲು ಮತ್ತು ನಮ್ಮ ಕಣ್ಣುಗಳನ್ನು ರಕ್ಷಿಸಲು ಕಣ್ಣೀರನ್ನು ಉತ್ಪಾದಿಸಲು ಮೆದುಳು ಕಣ್ಣೀರಿನ ಗ್ರಂಥಿಗಳಿಗೆ ಸಂದೇಶವನ್ನು ಕಳುಹಿಸುತ್ತದೆ. ಇದರಿಂದ ಕಣ್ಣೀರು ಉಂಟಾಗುತ್ತದೆ.

ಈರುಳ್ಳಿಯಿಂದ ಬಿಡುಗಡೆಯಾಗುವ ಅನಿಲದ ಪ್ರಮಾಣವು ಈರುಳ್ಳಿಯ ಪ್ರಕಾರ, ಅದರ ವಯಸ್ಸು ಮತ್ತು ಅದನ್ನು ಹೇಗೆ ಸಂಗ್ರಹಿಸಲಾಗಿದೆ ಎಂಬ ಅಂಶಗಳನ್ನು ಅವಲಂಬಿಸಿರುತ್ತದೆ. ಕೆಲವು ಈರುಳ್ಳಿಗಳು ನೈಸರ್ಗಿಕವಾಗಿ ಹೆಚ್ಚು ಕಟು ವಾಸನೆ ಹೊಂದಿರುತ್ತವೆ. ಇಂತಹ ಈರುಳ್ಳಿ ಬಲವಾದ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತದೆ.

ಈರುಳ್ಳಿ ಕತ್ತರಿಸುವಾಗ ಕಣ್ಣೀರು ಬಾರದಿರಲು ಕತ್ತರಿಸುವ ಮೊದಲು ಅದನ್ನು ರೆಫ್ರಿಜರೇಟರ್‌ನಲ್ಲಿಟ್ಟು ತಣ್ಣಗಾಗಿಸಬೇಕು, ಇಲ್ಲವೇ ಹರಿಯುವ ನೀರಿನ ಅಡಿಯಲ್ಲಿ ಕತ್ತರಿಸಬಹುದು ಅಥವಾ ಕನ್ನಡಕವನ್ನು ಧರಿಸಿ ಕತ್ತರಿಸಬಹುದು.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಸ್ವತಂತ್ರ ಭಾರತದ ಮೊದಲ ಕ್ರೀಡಾ ಕಂಚು

ಪ್ರಪಂಚದ ಉತ್ತಮ ಕ್ರೀಡಾಪಟುಗಳನ್ನು ಒಂದೆಡೆ ಸೇರಿಸಿ ಅತ್ಯುತ್ತಮ ಕ್ರೀಡಾಪಟುವನ್ನು ಕಂಡುಕೊಳ್ಳುವ ಕ್ರೀಡಾ ಹಬ್ಬವೇ ಒಲಂಪಿಕ್ಸ್. ಅದೆಷ್ಟೇ ಒಲಂಪಿಕ್ಸ್ ನಲ್ಲಿ ಭಾರತೀಯ ಕ್ರೀಡಾತಂಡ ಭಾಗವಹಿಸಿ ಆಯ್ದ ಕ್ರೀಡೆಗಳಲ್ಲಿ ಪದಕ ಗಳಿಸಿದರು ಪ್ರಪ್ರಥಮ ಕಂಚಿನ ಪದಕ,ಪಡೆದ ಕ್ರೀಡಾಪಟುವನ್ನು ಮರೆಯಲು ಸಾಧ್ಯವೇ ಇಲ್ಲ. ಮಹಾರಾಷ್ಟ್ರ ರಾಜ್ಯದ ಸತಾರಾ ಜಿಲ್ಲೆಯ ಕರದ್ ತಾಲ್ಲೂಕಿನಲ್ಲಿ ಗೋಲೇಶ್ವರ ಎಂಬ ಹಳ್ಳಿಯಲ್ಲಿ ಜನಿಸಿದ ಕೆ.ಡಿ. ಜಾಧವ್ ರವರು ಭಾರತೀಯ ಪ್ರಸಿದ್ಧ ಕುಸ್ತಿಪಟು.

ದಾದಾಸಾಹೇಬ್ ಜಾಧವ್ ಅವರ ಐದು ಗಂಡು ಮಕ್ಕಳಲ್ಲಿ ಇವರು ಕಿರಿಯವರು. 1940–1947 ರ ನಡುವೆ ಸತಾರಾ ಜಿಲ್ಲೆಯ ಕರಡ್ ತಾಲೂಕಿನ ತಿಲಕ್ ಪ್ರೌಢಶಾಲೆಯಲ್ಲಿ ತಮ್ಮ ಶಾಲಾ ಶಿಕ್ಷಣವನ್ನು ಇವರು ಪೂರೈಸಿದ್ದಾರೆ. ಕುಸ್ತಿಯನ್ನೇ ಉಸಿರಾಡುತ್ತಿದ್ದ ಮತ್ತು ಬದುಕುತ್ತಿದ್ದ ಮನೆತನದಲ್ಲಿ ಇವರು ಬೆಳೆದರು ಮತ್ತು ಅದನ್ನೇ ಸರ್ವಸ್ವವಾಗಿಸಿಕೊಂಡರು.

ಶ್ರೀಯುತರು ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿ ಕ್ರಾಂತಿಕಾರಿಗಳಿಗೆ ಆಶ್ರಯ ಮತ್ತು ಅಡಗುದಾಣವನ್ನು ನೀಡಿದ್ದರು, ಬ್ರಿಟಿಷರ ವಿರುದ್ಧ ಪತ್ರಗಳನ್ನು ಚಲಾವಣೆ ಮಾಡುವುದು ಚಳವಳಿಗೆ ಅವರ ಸ್ವಾತಂತ್ರ ಹೋರಾಟಕ್ಕೆ ತಮ್ಮದೇಯಾದ ಮೌಲ್ಯಯುತ ಕೊಡುಗೆಗಳನ್ನು ನೀಡಿದ್ದಾರೆ. ಸ್ವತಹ ತಂದೆ ದಾದಾಸಾಹೇಬ್ ಕುಸ್ತಿ ತರಬೇತುದಾರರಾಗಿದ್ದ ಪರಿಣಾಮ ಐದನೇ ವಯಸ್ಸಿನಲ್ಲಿ ಖಾಶಾಬರನ್ನು ಕುಸ್ತಿ ತರಬೇತಿ ನೀಡಲು ಪ್ರಾರಂಭಿಸಿದರು.

ಕಾಲೇಜಿನಲ್ಲಿ ಅವರ ಕುಸ್ತಿ ಮಾರ್ಗದರ್ಶಕರು ಬಾಬುರಾವ್ ಬಲಾವ್ಡೆ ಮತ್ತು ಬೆಲಾಪುರಿ ಗುರೂಜಿ ಕುಸ್ತಿಪಟ್ಟುಗಳನ್ನು ಕರಗತ ಮಾಡಿಸಿದರು. ಕುಸ್ತಿಯಲ್ಲಿನ ಅವರ ಪಾಲ್ಗೊಳ್ಳುವಿಕೆ ಮತ್ತು ಕಠಿಣ ತರಬೇತಿ ಓದಿನಲ್ಲಿ ಆಸಕ್ತಿ ಬಂದದಂತೆ ಮತ್ತು ಉತ್ತಮ ಅಂಕಗಳನ್ನು ಪಡೆಯುವುದನ್ನು ತಪ್ಪಿಸಲಿಲ್ಲ. 1948 ರಲ್ಲಿ ಅವರ ಕುಸ್ತಿ ವೃತ್ತಿಜೀವನವನ್ನು ಪ್ರಾರಂಭಿಸಿ, ಅವರು ಫ್ಲೈವೇಟ್ ವಿಭಾಗದಲ್ಲಿ 6 ನೇ ಸ್ಥಾನವನ್ನು ಗಳಿಸಿದಾಗ 1948 ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಮೊದಲ ಬಾರಿಗೆ ಬೆಳಕಿಗೆ ಬಂದರು.




ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Hampi Times E-paper
SCAN AND READ

ಅವರು 1948 ರವರೆಗೆ ವೈಯಕ್ತಿಕ ವಿಭಾಗದಲ್ಲಿ ಅಂತಹ ಉನ್ನತ ಸ್ಥಾನವನ್ನು ಸಾಧಿಸಿದ ಮೊದಲ ಭಾರತೀಯರಾಗಿದ್ದರು. ಮ್ಯಾಟ್(ಬೆಡ್) ಮೇಲೆ ಕುಸ್ತಿ ಮತ್ತು ಅಂತರರಾಷ್ಟ್ರೀಯ ಕುಸ್ತಿಯ ನಿಯಮಗಳ ಹೊರ ತಾಗಿಯೂ, ಜಾಧವ್ ಅವರ ಆರನೇ ಸ್ಥಾನವು ಆ ಸಮಯದಲ್ಲಿ ಸಾಧಾರಣ ಸಾಧನೆಯಾಗಿರಲಿಲ್ಲ. 1948ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಜಾಧವ್ ಅವರ ಮೊದಲ ದೊಡ್ಡ ವೇದಿಕೆಯ ಅನುಭವ;ಅವರ ಪ್ರಯಾಣಕ್ಕೆ ಕೊಲ್ಹಾಪುರದ ಮಹಾರಾಜರು ಧನಸಹಾಯ ನೀಡಿದರು.

ಅವರು ಲಂಡನ್‌ನಲ್ಲಿರುವಾಗ, ಯುನೈಟೆಡ್ ಸ್ಟೇಟ್ಸ್‌ನ ಮಾಜಿ ವಿಶ್ವ ಚಾಂಪಿಯನ್ ರೀಸ್ ಗಾರ್ಡ್ನರ್ ಅವರಿಂದ ತರಬೇತಿ ಪಡೆದರು.




ಮ್ಯಾಟ್‌ನಲ್ಲಿ ಕುಸ್ತಿಯ ಪರಿಚಯವಿಲ್ಲದಿದ್ದರೂ,ಫ್ಲೈವೇಟ್ ವಿಭಾಗದಲ್ಲಿ ಜಾಧವ್ ಆರನೇ ಸ್ಥಾನವನ್ನು ಗಳಿಸಲು ಗಾರ್ಡ್ನರ್ ಅವರ ಮಾರ್ಗದರ್ಶನವಾಗಿತ್ತು. ಪಂದ್ಯದ ಮೊದಲ ಕೆಲವು ನಿಮಿಷಗಳಲ್ಲಿ ಆಸ್ಟ್ರೇಲಿಯನ್ ಕುಸ್ತಿಪಟು ಬರ್ಟ್ ಹ್ಯಾರಿಸ್ ಅವರನ್ನು ಸೋಲಿಸುವ ಮೂಲಕ ಪ್ರೇಕ್ಷಕರನ್ನು ದಂಗುಬಡಿಸಿದರು. ಅವರು ಯು,ಎಸ್ ನ ಬಿಲ್ಲಿಜೆರ್ನಿಗನ್ ರನ್ನು ಸೋಲಿಸಲು ಹೋದರು, ಆದರೆ ಇರಾನ್‌ನ ಮನ್ಸೂರ್ ರೈಸಿ ಗೆ ಸೋತು, ಗೇಮ್ಸ್‌ನಿಂದ ಹೊರಹಾಕಲ್ಪಟ್ಟರು.



ಮುಂದಿನ ನಾಲ್ಕು ವರ್ಷಗಳ ಕಾಲ, ಜಾಧವ್ ಅವರು ಹೆಲ್ಸಿಂಕಿ(ಫಿನ್‌ಲ್ಯಾಂಡ್–19 ಜುಲೈನಿಂದ 03 ಆಗಸ್ಟ್ 1952 ರವರೆಗೆ)ಒಲಿಂಪಿಕ್ಸ್‌ಗಾಗಿ ಇನ್ನಷ್ಟು ಕಠಿಣ ತರಬೇತಿಯನ್ನು ಪಡೆದರು ಅಲ್ಲಿ ಅವರು ಒಂದು ತೂಕದ ವಿಭಾಗವನ್ನು ಮೇಲಕ್ಕೆತ್ತಿದರು ಮತ್ತು ಇಪ್ಪತ್ನಾಲ್ಕು ವಿವಿಧ ದೇಶಗಳ ಕುಸ್ತಿಪಟುಗಳನ್ನು ಕಂಡ ಬಾಂಟಮ್‌ವೇಟ್ ವಿಭಾಗದಲ್ಲಿ (57 ಇರ) ಭಾಗವಹಿಸಿದರು.ಅವರು ತಮ್ಮ ಸೆಮಿ ಫೈನಲ್ ಪಂದ್ಯವನ್ನು ಕಳೆದುಕೊಳ್ಳುವ ಮೊದಲು ಮೆಕ್ಸಿಕೊ,ಜರ್ಮನಿ ಮತ್ತು ಕೆನಡಾದಂತಹ ದೇಶಗಳ ಕುಸ್ತಿಪಟುಗಳನ್ನು ಸೋಲಿಸಿದರು. ಆದರೆ ಅವರು ಕಂಚಿನ ಪದಕವನ್ನು ಗೆಲ್ಲಲು ಬಲವಾಗಿ ಸೆಣಸಿ ವಿಜೇತರಾದರು,ಅದು ಅವರನ್ನು ಸ್ವತಂತ್ರ ಭಾರತದ ಮೊದಲ ವೈಯಕ್ತಿಕ ಒಲಿಂಪಿಕ್ ಪದಕ ವಿಜೇತರನ್ನಾಗಿ ಮಾಡಿತು.

1955 ರಲ್ಲಿ ಅವರು ಉಪ-ನಿರೀಕ್ಷಕರಾಗಿ ಪೊಲೀಸ್ ಪಡೆಗೆ ಸೇರಿ ಇಲಾಖೆಯಲ್ಲಿ ನಡೆದ ಹಲವಾರು ಸ್ಪರ್ಧೆಗಳಲ್ಲಿ ಗೆದ್ದರು ಮತ್ತು ಕ್ರೀಡಾ ಬೋಧಕರಾಗಿ ರಾಷ್ಟ್ರೀಯ ಕರ್ತವ್ಯಗಳನ್ನು ಸಹ ನಿರ್ವಹಿಸಿದರು. ಇಪ್ಪತ್ತೇಳು ವರ್ಷಗಳ ಕಾಲ ಪೊಲೀಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಸಹಾಯಕರಾಗಿ ನಿವೃತ್ತರಾಗಿದ್ದರು.ಕಾರಣಾಂತರಗಳಿಂದ ಜಾಧವ್ ತಮ್ಮ ಜೀವನದಲ್ಲಿ ನಂತರ ಪಿಂಚಣಿಗಾಗಿ ಹೋರಾಡಬೇಕಾಯಿತು. ವರ್ಷಗಟ್ಟಲೆ ಕ್ರೀಡಾ ಒಕ್ಕೂಟದ ಕಡೆಗಣನೆಗೆ ಒಳಗಾದ ಅವರು ಜೀವನದ ಕೊನೆಯ ಹಂತವನ್ನು ಬಡತನದಲ್ಲೇ ಕಳೆಯಬೇಕಾಯಿತು.

1984 ರಲ್ಲಿ ರಸ್ತೆ ಅಪಘಾತದಲ್ಲಿ ನಿಧನರಾದರು. ಶ್ರೀಯುತರಿಗೆ ದೆಹಲಿಯಲ್ಲಿ 1982 ಏಷ್ಯನ್ ಗೇಮ್ಸ್‌ನಲ್ಲಿ ಟಾರ್ಚ್ ರನ್‌ನ ಭಾಗವಾಗಿ ಅವರನ್ನು ಗೌರವಿಸಲಾಗಿದೆ.

ಮಹಾರಾಷ್ಟ್ರ ಸರ್ಕಾರವು 1992–1993ರಲ್ಲಿ ಮರಣೋತ್ತರವಾಗಿ ಛತ್ರಪತಿ ಪುರಸ್ಕಾರವನ್ನು ನೀಡಿದೆ.

ಮರಣೋತ್ತರವಾಗಿ 2000 ರಲ್ಲಿ ಅರ್ಜುನ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

2010ರ ದೆಹಲಿ ಕಾಮನ್‌ವೆಲ್ತ್ ಗೇಮ್ಸ್‌ಗಾಗಿ ಹೊಸದಾಗಿ ನಿರ್ಮಿಸಲಾದ ಕುಸ್ತಿ ಸ್ಥಳಕ್ಕೆ ಅವರ ಸಾಧನೆಯನ್ನು ಗೌರವಿಸಲು ಅವರ ಹೆಸರನ್ನು ಇಡಲಾಗಿದೆ.

ಗೂಗಲ್ ಸಂಸ್ಥೆ 15 ಜನವರಿ 2023 ರಂದು ಜಾಧವ್ ಗೂಗಲ್ ಡೂಡಲ್ ಮೂಲಕ ಅವರ ಜನ್ಮ ವಾರ್ಷಿಕೋತ್ಸವ ಆಚರಿಸಿ ಗೌರವಿಸಿದೆ.

ಶ್ರೀಯುತರ ಬಗ್ಗೆ ಪುಸ್ತಕಗಳು ಪ್ರಕಟಗೊಂಡಿದ್ದು, ಇವರ ಜೀವನ ಚರಿತ್ರೆ ಆಧಾರಿತ ಸಿನಿಮಾ ತೆಗೆಯುವ ಕೆಲಸವು ನಡೆಯುತ್ತಿದೆ. ಒಲಂಪಿಕ್ಸ್ ನಲ್ಲಿ ವೈಯಕ್ತಿಕ ವಿಭಾಗಗಳಲ್ಲಿ ಮೊದಲ ಕಂಚಿನ ಪದಕ ತಂದ ಮಹಾನ್ ಚೇತನ, ಭಾರತದ ಹೆಮ್ಮೆಯ ಕುಸ್ತಿಪಟು ಇವರಾಗಿದ್ದಾರೆ. ಇದೇ ವರ್ಷ ನಡೆಯಲಿರುವ ಪ್ಯಾರಿಸ್ ಒಲಂಪಿಕ್ಸ್ ನಲ್ಲಿ ಇನ್ನಷ್ಟು ಪದಕಗಳನ್ನು ನಮ್ಮ ಕ್ರೀಡಾಪಟುಗಳು ಪಡೆಯಲೆಂದು ಹಾರೈಸೋಣ.

# ಕಲುಷಿತ ನೀರು ಪೂರೈಕೆಯಾಗದಿರಲಿ

## ನೀರಿನ ಮೂಲಗಳು, ಆಹಾರದ ತಯಾರಿಕೆಯ ಸ್ಥಳ, ಮುಂತಾದವುಗಳನ್ನು ಪರಿಶೀಲಿಸಿ ಜಿಪಂ ಸಿಇಓ ರಾಹುಲ್ ಶರಣಪ್ಪ ಸಂಕನೂರ ಸೂಚನೆ | ಜಿಲ್ಲಾ ಆರೋಗ್ಯ ಸಂಘ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಮಳೆಗಾಲದ ಹಿನ್ನಲೆಯಲ್ಲಿ ಕುಡಿಯುವ ನೀರು ಕಲುಷಿತವಾಗದಂತೆ ಹಾಗೂ ನಿಯಮಿತವಾಗಿ ಎಲ್ಲನೀರಿನಮೂಲಗಳನ್ನುಪರೀಕ್ಷೆಗೊಳಪಡಿಸಿದ ನಂತರವೇ ಕುಡಿಯಲು ಪೂರೈಕೆ ಮಾಡಬೇಕು. ಸಂಭಾವ್ಯ ವಾಂತಿಭೇದಿ ಪ್ರಕರಣಗಳು ಕಂಡು ಬರಬಹುದಾಗಿದ್ದು, ಜಾಗ್ರತೆ ವಹಿಸಬೇಕು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಹೇಳಿದರು.

ಇಂದು, ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆರೋಗ್ಯ ಸಂಘದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಳೆಗಾಲ ಹಿನ್ನಲೆಯಲ್ಲಿ ನೀರು ಅಲ್ಲಲ್ಲಿ ನಿಲ್ಲುವ ಸಾಧ್ಯತೆಯಿದ್ದು, ಚರಂಡಿ ಹತ್ತಿರದ ಪೈಪ್‌ಲೈನ್‌ಗಳು ಸೋರಿಕೆ ಕಂಡು ಬಂದಲ್ಲಿ ತಕ್ಷಣ ಆಯಾ ಸ್ಥಳೀಯ-ಸಂಸ್ಥೆ, ಪಂಚಾಯತ್‌ಗಳಿಗೆ ತಿಳಿಸುವ ಕಾರ್ಯ ಮಾಡಬೇಕು. ನೀರಿನ ಮೂಲಗಳನ್ನು ಗ್ರಾಮ ಪಂಚಾಯತ್ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ನಿಯಮಾನುಸಾರ ಕ್ಲೋರಿನೇಷನ್ ಮಾಡಿಸಬೇಕು ಎಂದು ನಿರ್ದೇಶನ ನೀಡಿದರು.

ಮೊಹರಮ್ ಹಬ್ಬದ ಹಿನ್ನಲೆ ಗ್ರಾಮಗಳಲ್ಲಿ ಹೆಚ್ಚು ಜನಸೇರುವ ಸಾಧ್ಯತೆ ಇದ್ದು, ಶುದ್ಧ ನೀರು ಸೇವನೆ ಕುರಿತು ಜಾಗೃತಿ ನೀಡಬೇಕು. ಯಾವುದೇ ವಾಂತಿಭೇದಿ ಪ್ರಕರಣ ವರದಿಯಾಗದಂತೆ ಕ್ರಮವಹಿಸಿ ಎಂದರಲ್ಲದೇ ನೀರಿನ ಮೂಲಗಳ ಸುತ್ತಲೂ ದನಕರುಗಳನ್ನು ತೊಳೆಯದಂತೆ, ಬಟ್ಟೆ ಒಗೆಯದಂತೆ, ನಳಗಳು ತೆಗ್ಗಿನಲ್ಲಿ ಇರದಂತೆ, ಇದಕ್ಕೆ ಗ್ರಾಮ ಪಂಚಾಯತ್ ಒಳಗೊಂಡಂತೆ ಎಲ್ಲ ಸ್ಥಳೀಯ ಸಂಸ್ಥೆಗಳು ಸಹಭಾಗಿತ್ವದಲ್ಲಿ ಸಾರ್ವಜನಿಕರಿಗೆ ಜಾಗೃತಿ ನೀಡಬೇಕು ಎಂದು ತಿಳಿಸಿದರು.



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ಮಾತನಾಡಿ, ಜಿಲ್ಲೆಯಲ್ಲಿ ಇಲ್ಲಿಯವರೆಗೆ ಪ್ರಮುಖ ಜಾತ್ರೆಗಳು, ಉತ್ಸವಗಳಲ್ಲಿ ಜಿಲ್ಲಾ ಕಾಲರಾ ನಿಯಂತ್ರಣ ತಂಡವು ಸಕಾಲದಲ್ಲಿ ಉಪಸ್ಥಿತರಿದ್ದು, ನೀರಿನ ಮೂಲಗಳು, ಆಹಾರದ ತಯಾರಿಕೆಯ ಸ್ಥಳ, ಮುಂತಾದವುಗಳನ್ನು ಪರಿಶೀಲಿಸಿ ನಿಗಾ ವಹಿಸುವ ಮೂಲಕ ವಾಂತಿ-ಬೇಧಿ ಪ್ರಕರಣಗಳು ವರದಿಯಾಗದಂತೆ ಕ್ರಮವಹಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಸಂಡೂರು ತಾಲ್ಲೂಕಿನ ನಾಗೇನಹಳ್ಳಿಯಲ್ಲಿ ಪ್ರಕರಣಗಳು ನಿಯಂತ್ರಣದಲ್ಲಿವೆ. ವೈದ್ಯಕೀಯ ತಂಡಗಳನ್ನು ರಚಿಸಿ ಜಾಗೃತಿ ನೀಡಲಾಗುತ್ತಿದೆ. ಅಶುದ್ಧವೆಂದು ಕಂಡು ಬಂದ ನೀರಿನ ಮೂಲಗಳನ್ನು ಗ್ರಾಮ ಪಂಚಾಯತ್ ಹಾಗೂ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ಪರೀಕ್ಷೆಗೆ ಒಳಪಡಿಸಿ ಕುಡಿಯುವ ನೀರು ಪೂರೈಕೆಗೆ ಕ್ರಮವಹಿಸಲಾಗಿದೆ ಎಂದು ಮಾಹಿತಿ ನೀಡಿದರು.

ಮಳೆಯ ಆರಂಭ ಹಾಗೂ ರಾಜ್ಯಾದ್ಯಂತ ಡೆಂಗ್ಯು ರೋಗದ ತೀವ್ರತೆ ಹೆಚ್ಚಿರುವುದರಿಂದ ಪ್ರತಿ ಶುಕ್ರವಾರ ಈಡಿಸ್ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲಾಗುತ್ತಿದೆ. ಶಾಲೆಯಲ್ಲಿ ಮಕ್ಕಳಿಗೆ ಮನೆಗಳಲ್ಲಿಯ ನೀರು ಸಂಗ್ರಹಕಗಳಲ್ಲಿ ಲಾರ್ವಾ( ಸೊಳ್ಳೆಮರಿ) ಕಂಡುಬಂದಲ್ಲಿ ಖಾಲಿ ಮಾಡಿಸುವಂತೆ ಮತ್ತು ಅಗತ್ಯವಿದ್ದಲ್ಲಿ ಇನ್ನೊಂದು ಸಂಗ್ರಹಕ್ಕೆ ಬಟ್ಟೆಯಿಂದ ನೀರನ್ನು ಸೋಸಿ ಹಾಕುವಂತೆ ಹಾಗೂ ಲಾರ್ವಾ ಗುರ್ತಿಸಿದ ಮಕ್ಕಳಿಗೆ ಪ್ರಾರ್ಥನೆ ವೇಳೆಯಲ್ಲಿ ಮೆಚ್ಚುಗೆ ನುಡಿಗಳನ್ನು ಶಿಕ್ಷಣ ಇಲಾಖೆ ಮೂಲಕ ಕೈಗೊಳ್ಳಲಾಗುತ್ತಿದೆ ಎಂದರು.

> ಬಾಲ್ಯದಲ್ಲಿಯ ಮಾರಕ ರೋಗಗಳ ತಡೆಗೆ ಲಸಿಕೆಯನ್ನು ಮಕ್ಕಳಿಗೆ ಸಕಾಲದಲ್ಲಿ ಹಾಕಿಸಲು ಹಾಗೂ ಬಿಟ್ಟು ಹೋದ ಮಕ್ಕಳು ಲಸಿಕೆ ವಂಚಿತ ಮಕ್ಕಳನ್ನು ಗುರ್ತಿಸಿ ಲಸಿಕೆ ಹಾಕಲು ಕ್ಷೇತ್ರ ಮಟ್ಟದ ಸಿಬ್ಬಂದಿಯವರು ಅಧಿಕಾರಿಗಳು ಕ್ರಿಯಾ ಯೋಜನೆ ಹಮ್ಮಿಕೊಂಡು ಕಾರ್ಯ ನಿರ್ವಹಿಸಲಾಗುತ್ತಿದೆ
>
> **– ರಾಹುಲ್ ಶರಣಪ್ಪ ಸಂಕನೂರ**
> ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ನೀರಿನ ಸಂಗ್ರಹಾರಕಗಳನ್ನು ಪ್ರತಿ ವಾರಕ್ಕೊಮ್ಮೆ ಸ್ವಚ್ಛಗೊಳಿಸಿ, ಕುಡಿಯಲು ಬಳಸದೆ ಅಗತ್ಯವಿದ್ದಲ್ಲಿ ಕೇವಲ ಇತರೆ ಬಳಸಿಕೊಳ್ಳಬೇಕು. ನೀರು ತುಂಬುವ ಪರಿಕರಗಳಿಗೆ ಟೆಮೋಪಾಸ್ ರಾಸಾಯನಿಕ ಹಾಕಬಹುದಾಗಿದ್ದು, ಈ ಕುರಿತು ಕುಟುಂಬದ ಸದಸ್ಯರಿಗೆ ತಿಳಿಸಿಕೊಡಲಾಗುತ್ತಿದೆ. ತ್ಯಾಜ್ಯ ವಿಲೇವಾರಿ ವಾಹನ ಮೂಲಕ ಮೈಕಿಂಗ್, ಡಂಗುರ ಹಾಕಿಸಲು ಪ್ರಚಾರ ಕೈಗೊಳ್ಳಲಾಗುತ್ತಿದೆ ಎಂದರು.

ಕ್ಷಯರೋಗ ನಿಯಂತ್ರಣ ಕುರಿತು ಮಾತನಾಡಿದ ಅವರು, ಜಿಲ್ಲೆಯಲ್ಲಿ ಆರಂಭಿಕ ಹಂತದಲ್ಲಿ ರೋಗಿಗಳನ್ನು ಗುರ್ತಿಸಲು ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಕೆಮ್ಮು ಹಾಗೂ ಕ್ಷಯರೋಗದ ಲಕ್ಷಣಗಳು ಇದ್ದಲ್ಲಿ ಅಂತವರನ್ನು ಅಸಾಂಕ್ರಾಮಿಕ ರೋಗ ಪರೀಕ್ಷೆ ವಿಭಾಗದಲ್ಲಿ ಅಗತ್ಯ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ. ಖಚಿತ ಪಟ್ಟಲ್ಲಿ ತಕ್ಷಣ ಚಿಕಿತ್ಸೆ ನೀಡಿ, ಕ್ಷಯಮುಕ್ತ ಬಳ್ಳಾರಿ ಅಭಿಯಾನವನ್ನು ಯಶಸ್ವಿಗೊಳಿಸಲಾಗುತ್ತಿದೆ ಡಿಹೆಚ್‌ಓ ಸಭೆಗೆ ತಿಳಿಸಿದರು.

ಆರೋಗ್ಯ ಸಿಂಚನ: 07 ನೇ ತರಗತಿಯಿಂದ 10 ನೇ ತರಗತಿಯ ಮಕ್ಕಳಿಗೆ ಬಾಲ್ಯವಿವಾಹ, ಐಯೋಡಿನ್ ನ್ಯೂನ್ಯತೆಗಳು, ಡೆಂಗ್ಯು ಜ್ವರ, ವಾಂತಿ-ಬೇಧಿ ನಿಯಂತ್ರಣ ಕುರಿತು ಏಕಕಾಲಕ್ಕೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಜಿಪಂ ಸಿಇಓ ಅವರು ಸೂಚಿಸಿದರು.

ಸಭೆಯಲ್ಲಿ ಅಂಧತ್ವ ನಿಯಂತ್ರಣ ಕಾರ್ಯಕ್ರಮ ಹಾಗೂ ನವಜಾತ ಶಿಶುಗಳ ಆರೈಕೆ ಕಾರ್ಯಕ್ರಮ ಸೇರಿದಂತೆ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಕುರಿತು ವ್ಯಾಪಕವಾಗಿ ಚರ್ಚಿಸಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ.ಆರ್.ಅಬ್ದುಲ್ಲಾ, ಡಾ.ಮರಿಯಂಬಿ ವಿ.ಕೆ., ಡಾ.ಇಂದ್ರಾಣಿ.ವಿ., ಡಾ.ಹನುಮಂತಪ್ಪ, ಡಾ.ವಿರೇಂದ್ರಕುಮಾರ್, ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ಈರಣ್ಣ, ಡಾ.ಭರತ್, ಡಾ.ಫಾರೂಖ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ದಾಸಪ್ಪನವರ, ಡಾ.ಜಬೀನ್ ತಾಜ್, ಡಿಎನ್‌ಓ ಗಿರೀಶ್, ವೆಂಕೋಬ್ ನಾಯ್ಕ್, ಮನೋಹರ, ರಾಘವೇಂದ್ರ ಬಸವರಾಜ, ಅರ್ಚನಾ ಹಾಗೂ ಸಿಬ್ಬಂದಿಯವರು ಉಪಸ್ಥಿತರಿದ್ದರು.

# ವೈದ್ಯರಿಗೆ ಕಲರ್ ಡಾಪ್ಲರಿಂಗ್ ಕಾರ್ಯಾಗಾರ
# ತಾಯಿ ಮಗು ಮರಣ ತಡೆಗೆ ಡಾಪ್ಲರ್ ಸಹಕಾರಿ

## ಡಿಎಚ್‌ಒ ಡಾ.ಎಲ್.ಆರ್.ಶಂಕರ್‌ನಾಯ್ಕ್ ಹೇಳಿಕೆ । ವಿಒಜಿಎಸ್ ನಿಂದ ಮೊದಲ ಬಾರಿಗೆ ವೈದ್ಯರಿಗೆ ತರಬೇತಿ





■ **ಹಂಪಿ ಟೈಮ್ಸ್ ಹೊಸಪೇಟೆ**

ತಾಯಿ ಮತ್ತು ಮಗುವಿನ ಆರೋಗ್ಯ ಕಾಪಾಡಿ ಮರಣ ಪ್ರಮಾಣ ತಡೆಯುವ ನಿಟ್ಟಿನಲ್ಲಿ ಡಾಪ್ಲರ್ ಸ್ಟಡೀಸ್ ಸಹಕಾರಿಯಾಗಿದೆ ಎಂದು ಡಿಎಚ್‌ಒ ಡಾ.ಎಲ್.ಆರ್.ಶಂಕರ್‌ನಾಯ್ಕ್ ಹೇಳಿದರು.

ವಿಜಯನಗರ ಆಬ್‌ಸ್ಟ್ರೆಟಿಕ್ಸ್ ಗೈನಕಾಲಜಿಸ್ಟ್ ಸೊಸೈಟಿ ಹಾಗೂ ಐಆರ್‌ಐಎ ಸಂಸ್ಥೆಯ ವತಿಯಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಭಾನುವಾರ ಆಯೋಜಿಸಿದ್ದ ಡಾಪ್ಲರ್ ಆಬ್‌ಸ್ಟ್ರೆಟಿಕ್ಸ್ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದರು.

ಕಲರ್ ಡಾಪ್ಲರಿಂಗ್‌ನಿಂದ ಗರ್ಭಿಣಿಯರ ರಕ್ತದೊತ್ತಡ ಮತ್ತು ಮಗುವಿನ ರಕ್ತ ಸಂಚಲನ ತಿಳಿದು ಚಿಕಿತ್ಸೆ ನೀಡುವುದಕ್ಕೆ ಅನುಕೂಲವಾಗಲಿದೆ. ಹೆರಿಗೆಗೆ ಮುನ್ನ ಮಗುವಿನ ಆರೋಗ್ಯ ಕಾಳಜಿ ವಹಿಸುವುದು ಅತ್ಯಂತ ಅಗತ್ಯವಾಗಿದ್ದು, ಡಾಪ್ಲರ್ ಸ್ಟಡೀಸ್‌ನಿಂದ ಯಾವಾಗ ಹೆರಿಗೆ ಮಾಡಿಸಬೇಕು ಮತ್ತು ಮಗುವಿನ ಚಲನವಲನ ಸೇರಿದಂತೆ ಬೆಳವಣಿಗೆ ಕುರಿತು ತಿಳಿದು ಎಚ್ಚರಿಕೆ ವಹಿಸಲು ಅನುಕೂಲವಾಗಲಿದೆ ಎಂದರು.

ಡಾಪ್ಲರ್ ಸ್ಟಡೀಸ್‌ನಿಂದ ರಕ್ತಚಲನವಲನ, ಯಾವಾಗ ಹೆರಿಗೆ ಮಾಡಿಸಬೇಕು ಮತ್ತು ಮಗುವಿನ ಬೆಳವಣಿಗೆ ಸೇರಿದಂತೆ ಹಲವಾರು ಮಾಹಿತಿಗಳನ್ನು ಡಾಪ್ಲರ್ ಸ್ಟಡೀಸ್‌ನಿಂದ ಬೇಗ ಕಂಡು ಹಿಡಿಯಬಹುದು. ಇದರಿಂದ ತಾಯಿ ಮತ್ತು ಮಗು ಮರಣ ಪ್ರಮಾಣಗಳನ್ನು ಕಡಿಮೆ ಮಾಡಬಹುದು ಎಂದು ಹೇಳಿದರು.

ಕಾಯಿದೆಯನ್ವಯ ಸ್ಕ್ಯಾನಿಂಗ್ ಸೆಮಟರ್‌ಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ಅಗತ್ಯ ದಾಖಲೆಗಳನ್ನು ನಿರ್ವಹಿಸಬೇಕು. ಸಿಸಿ ಕ್ಯಾಮೆರಾ ಹಾಗೂ ಕಾಯಿದೆಯನ್ವಯ ನಾಮಫಲಕ ಸೇರಿದಂತೆ ನಿಯಮ ಉಲ್ಲಂಘನೆ ಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದರು.

ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಜಂಬಯ್ಯ, ವಿಜಯನಗರ ಆಬ್‌ಸ್ಟ್ರೆಟಿಕ್ಸ್ ಗೈನಕಾಲಜಿಸ್ಟ್ ಸೊಸೈಟಿ ಅಧ್ಯಕ್ಷೆ ಡಾ.ಶಶಿಕಲಾ ಗುಗ್ರಿ, ಕಾರ್ಯದರ್ಶಿ ಹೇಮಲತಾ ತಾಂಡೂರು, ಡಾ.ಸುಮಂಗಲ, ಡಾ.ಈಶ್ವರ ಸವದಿ, ಡಾ.ಅರುಣ್ ಕುಮಾರ್, ಡಾ.ಕಿಶನ್ ಭಾಗವತ್, ಡಾ.ರಶ್ಮಿ ಪಟೇಲ್, ಡಾ.ಶಾವಂತಿ ಪೂತಾ, ಡಾ.ಗುರುನಂದಿನಿ ಸೇರಿದಂತೆ ಕೊಪ್ಪಳ, ಕುಷ್ಟಗಿ, ಗಂಗಾವತಿ, ಬಳ್ಳಾರಿ, ಸಿಂಧನೂರು ಹಾಗೂ ನಾನಾ ಜಿಲ್ಲೆಗಳ ವೈದ್ಯರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

# ದೈಹಿಕ ಶಿಕ್ಷಣ, ಕ್ರೀಡಾ ಕ್ಷೇತ್ರದಲ್ಲಿ ಪ್ರಾಯೋಗಿಕ ಅನುಭವ ಅವಶ್ಯಕ

## ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ತಿಪ್ಪೇರುದ್ರಪ್ಪ.ಜೆ ಹೇಳಿಕೆ

■ **ಹಂಪಿ ಟೈಮ್ಸ್ ಬಳ್ಳಾರಿ**

ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಭಾಗದ ಪ್ರಶಿಕ್ಷಣಾರ್ಥಿಗಳು ಪರಿಪೂರ್ಣವಾಗಬೇಕಾದರೆ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರಾಯೋಗಿಕ ಅನುಭವ ಹೊಂದಬೇಕು ಎಂದು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ತಿಪ್ಪೇರುದ್ರಪ್ಪ.ಜೆ ಅವರು ಹೇಳಿದರು.

ಇಲ್ಲಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ ಶಾಲಾಂತರ್ಗತ ಗುಡ್ಡಗಾಡು ಓಟದ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ವಿಶ್ವವಿದ್ಯಾಲಯದಲ್ಲಿ ಇಂಥ ಕ್ರೀಡಾ ಚಟುವಟಿಕೆಗಳು ಸಂಘಟಿಸುವುದರಿಂದ ಎಂಪಿಇಡಿ ಪ್ರಶಿಕ್ಷಣಾರ್ಥಿಗಳಿಗೆ ಪ್ರಾಯೋಗಿಕ ಅನುಭವವಾಗಿ ಮುಂದಿನ ವೃತ್ತಿಯಲ್ಲಿ ಅವರು ಸಮರ್ಥರಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುವುದು ಎಂದು ಅವರು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ವಿವಿಯ ದೈಹಿಕ ಶಿಕ್ಷಣ ಮತ್ತು ಕ್ರೀಡೆ ವಿಭಾಗದ ಮುಖ್ಯಸ್ಥ ಡಾ.ಶಶಿಧರ ಕೆಲ್ಲೂರ ಅವರು ಮಾತನಾಡಿ, ಪ್ರಶಿಕ್ಷಣಾರ್ಥಿಗಳು ಕ್ರೀಡಾಕೂಟಗಳಲ್ಲಿ ಭಾಗವಹಿಸಲು ಮೊದಲು ಯೋಜನೆ ರೂಪಿಸಬೇಕು, ಅದಕ್ಕೆ ತಕ್ಕಂತೆ ಸಿದ್ಧತೆ ಮಾಡಿಕೊಂಡು ಕಾರ್ಯಪ್ರವೃತ್ತರಾಗಬೇಕು. ಆಗ ಮಾತ್ರ ಕ್ರೀಡಾಕೂಟದಲ್ಲಿ ಯಶಸ್ವಿಯಾಗಲು ಸಾಧ್ಯ ಎಂದು ಹೇಳಿದರು.



**ಫಲಿತಾಂಶ:** ಪುರುಷರ ವಿಭಾಗ: ಪ್ರಥಮ ಸ್ಥಾನ–ಮಲ್ಲಿಕಾರ್ಜುನ(ನೀರಜ ಛೋಪ್ರಾ ತಂಡ), ದ್ವಿತೀಯ ಸ್ಥಾನ–ಚಂದ್ರಯ್ಯ(ಮೇಜರ ಧ್ಯಾನ ಚಂದ ತಂಡ), ತೃತೀಯ ಸ್ಥಾನ–ಸಂತೋಷ್ ಕುಮಾರ(ಅಭಿನವ್ ಭಿಂದಾ ತಂಡ).

ಮಹಿಳೆಯರ ವಿಭಾಗ: ಪ್ರಥಮ ಸ್ಥಾನ–ಪೂಜಾ(ನೀರಜ ಛೋಪ್ರಾ ತಂಡ), ದ್ವಿತೀಯ ಸ್ಥಾನ–ಮಹಾದೇವಿ(ಪಿ.ವಿ.ಸಿಂಧು ತಂಡ), ತೃತಿಯ ಸ್ಥಾನ–ಸುನಿತಾ(ಅಭಿನವ್ ಭಿಂದಾ ತಂಡ) ಹಾಗೂ ಮೇಜರ ಧ್ಯಾನ ಚಂದ ತಂಡದವರು ವೀರಾಗ್ರಣಿ ಪ್ರಶಸ್ತಿಯನ್ನು ಪಡೆದರು.

ಬಳಿಕ ಸಮಾರೋಪ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಸಹಾಯಕ ಪ್ರಾಧ್ಯಾಪಕ ಡಾ.ಸಂಪತ್ ಕುಮಾರ್, ಶಾಲಾಂತರ್ಗತ ಕ್ರೀಡಾಕೂಟದ ನಿರ್ದೇಶಕ ರಾಜೇಶ್, ಅತಿಥಿ ಉಪನ್ಯಾಸಕ ಕೆ.ಮಹೇಶ್ ಬಾಬು, ವಿದ್ಯಾರ್ಥಿ ಕಾರ್ಯದರ್ಶಿ ಅರುಣಕುಮಾರ ಸೇರಿದಂತೆ ಸಂಶೋಧನಾ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

# ರೈತರು ತಮ್ಮ ಬೆಳೆ ವಿವರಕ್ಕೆ ಮೊಬೈಲ್ ಆಪ್ ಬಳಸಿ

■ **ಹಂಪಿ ಟೈಮ್ಸ್ ಬಳ್ಳಾರಿ**

ರೈತರು ತಮ್ಮ ಹೊಲಗಳಲ್ಲಿ ಬೆಳೆದ ಬೆಳೆಗಳ ವಿವರ ದಾಖಲಿಸಲು ಆಂಡ್ರಾಯ್ಡ್ ಆಪ್ ಡೌನ್‌ಲೋಡ್ ಮಾಡಿಕೊಂಡು ಬೆಳೆ ವಿವರ ತಾವೇ ಸ್ವತಃ ಮೊಬೈಲ್ ತಂತ್ರಾಂಶದ ಮೂಲಕ ದಾಖಲಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕ ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

ಜಿಲ್ಲೆಯಾದ್ಯಂತ ಮುಂಗಾರು ಬೆಳೆ ಸಮೀಕ್ಷೆ ಆರಂಭವಾಗಿದ್ದು, ರೈತರು ಬೆಳೆದ ಬೆಳೆಗಳ ಬಗ್ಗೆ ನಿಖರವಾಗಿ ಮಾಹಿತಿ ಪಡೆದುಕೊಳ್ಳಲು ಇ–ಆಡಳಿತ ವತಿಯಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ಆಪ್ ಮೂಲಕ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ.

**ಮೊಬೈಲ್ ಅಪ್ಲಿಕೇಷನ್ ಪಡೆಯಲು ಅನುಸರಿಸಬೇಕಾದ ಅಂಶಗಳು:** ರೈತರು ತಮ್ಮ ಮೊಬೈಲ್‌ನಲ್ಲಿ ಗೂಗಲ್ ಪ್ಲೇಸ್ಟೋರ್‌ನಿಂದ ಬೆಳೆ ಸಮೀಕ್ಷೆ ಮುಂಗಾರು ಹಂಗಾಮಿನ "ಕ್ರಾಪ್ ಸರ್ವೇ ಖಾರಿಫ್ 2024" (Crop Survey Kharif 2024) ಆಪ್‌ನ್ನು ಡೌನ್ಲೋಡ್ ಮಾಡಿಕೊಳ್ಳಬೇಕು. ಜಿಲ್ಲೆಯಲ್ಲಿ 3,80,888 ಬೆಳೆ ತಾಕುಗಳಿದ್ದು, ಆ ತಾಕುಗಳಿಗೆ ರೈತರು ತಮ್ಮ ಬೆಳೆಗಳ ಮಾಹಿತಿಯನ್ನು ಸ್ವಯಂ ದಾಖಲಿಸಬೇಕು ಎಂದು ಅವರು ತಿಳಿಸಿದ್ದಾರೆ.

ಬೆಳೆ ಸಮೀಕ್ಷೆ ದತ್ತಾಂಶ ಮಾಹಿತಿಯನ್ನು ಬೆಳೆ ವಿಸ್ತರಣೆ ಎಣಿಕೆ ಕಾರ್ಯದಲ್ಲಿ, ಬೆಳೆ ಕಟಾವು ಪ್ರಯೋಗದಲ್ಲಿ, ಪ್ರಕೃತಿ ವಿಕೋಪ ಸಂದರ್ಭದಲ್ಲಿ, ಬೆಳೆಹಾನಿ ವರದಿ ಸಿದ್ಧಪಡಿಸಲು, ಬೆಳೆ ವಿಮಾ ಯೋಜನೆ, ಬೆಂಬಲ ಬೆಲೆ ಯೋಜನೆ, ಆರ್.ಟಿ.ಸಿ.ಯಲ್ಲಿ ಬೆಳೆ ವಿವರ ದಾಖಲಿಸಲು, ರಾಷ್ಟ್ರೀಯ ಹಾಗೂ ಗ್ರಾಮೀಣ ಬ್ಯಾಂಕ್‌ಗಳಲ್ಲಿ ಬೆಳೆ ಸಾಲ ಮಂಜೂರು ಮಾಡಲು ಬೆಳೆ ಸಮೀಕ್ಷೆ ಮಾಹಿತಿಯನ್ನು ಉಪಯೋಗಿಸಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕೃಷಿ, ತೋಟಗಾರಿಕೆ, ಪಿ.ಆರ್ ಅಥವಾ ಕಂದಾಯ ಇಲಾಖೆಯ ಸಿಬ್ಬಂದಿಗಳನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಅಗತ್ಯ ಮಾಹಿತಿ ಅಂಗೈಯಲ್ಲಿರಲಿ

ಮೊದಲ ಪುಟದಿಂದ

ಚುರುಕಾಗಿ ಮಾಡಬೇಕು. ಸಾರ್ವಜನಿಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಕಾರ್ಯನಿರ್ವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಪಾಲನೆ ಇಲಾಖೆಯ ಅಧಿಕಾರಿಗಳು ಕಾಲಕಾಲಕ್ಕೆ ಜಿಲ್ಲೆಯ ರೈತರ ಸಭೆ ಕರೆದು ಅವರಿಗೆ ನಾನಾ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಬೇಕು. ಸಕಾಲಕ್ಕೆ ಬೀಜ, ಗೊಬ್ಬರ ವಿತರಣೆಗೆ ಕ್ರಮ ವಹಿಸಬೇಕು. ರೈತರ ಆತ್ಮಹತ್ಯೆಯಂತಹ ಪ್ರಕರಣಗಳಲ್ಲಿ ವಿಳಂಬ ಮಾಡದೇ ಪಾರದರ್ಶಕತೆ ಕಾಯ್ದುಕೊಂಡು ಬೇಗನೆ ಪರಿಹಾರ ದೊರಕುವಂತೆ ಮಾಡಿ ಸಂತ್ರಸ್ಥರಿಗೆ ಆತ್ಮವಿಶ್ವಾಸ ತುಂಬುವ ಕಾರ್ಯ ಮಾಡಬೇಕು. ಅರ್ಹರಿಗೆ ಮಾತ್ರ ಬಿಪಿಎಲ್ ಕಾರ್ಡುಗಳು ಸಿಗುವ ಹಾಗೆ ಆಹಾರ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ವಿವಿಧ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪೌರಾಯುಕ್ತರಿಗೆ ಸೂಚನೆ: ಮಳೆಗಾಲ ಆರಂಭವಾಗಿದ್ದರಿಂದ ಅಲ್ಲಲ್ಲಿ ತಗ್ಗು ಗುಂಡಿಗಳು ಬಿದ್ದು ಪೈಪು ಒಡೆದು ಅದರಲ್ಲಿ ಕಲುಷಿತ ನೀರು ಸೇರಿ ಕಾಲರಾ, ವಾಂತಿ ಬೇಧಿ ಉಂಟಾಗಿ ಜನರ ಜೀವನಕ್ಕೆ ಕುತ್ತು ಬಾರದ ಹಾಗೆ ನಗರಸಭೆ ಅಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ನಿರಂತರವಾಗಿ ನಗರ ಸಂಚಾರ ಕೈಗೊಂಡು ಮುನ್ನೆಚ್ಚರಿಕೆ ವಹಿಸಬೇಕು. ನಗರವಾಸಿಗಳಿಗೆ ಕಾಲಕಾಲಕ್ಕೆ ಮೂಲಭೂತ ಸೌಕರ್ಯ ಸಿಗುವ ನಿಟ್ಟಿನಲ್ಲಿ ನಗರಸಭೆಯಿಂದ ಟೆಂಡರ್ ಪ್ರಕ್ರಿಯೆ ಸೇರಿದಂತೆ ಎಲ್ಲಾ ಕೆಲಸ ಕಾಮಗಾರಿಗಳು ಕಾಲಮಿತಿಯೊಳಗೆ ನಡೆದು ಪೂರ್ಣವಾಗಬೇಕು ಎಂದು ನಗರಸಭೆ ಪೌರಾಯುಕ್ತರಿಗೆ ಡಿಸಿ ನಿರ್ದೇಶನ ನೀಡಿದರು.

ಆರೋಗ್ಯ ಇಲಾಖೆಗೆ ಸೂಚನೆ: ಡೆಂಗೆಯನ್ನು ಕೂಡಲೇ ನಿಯಂತ್ರಣಕ್ಕೆ ತರಬೇಕು. ವೈದ್ಯಾಧಿಕಾರಿಗಳು ತಾಲೂಕು ಮಟ್ಟದ ವೈದ್ಯಾಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಕಾರ್ಯನಿರ್ವಹಿಸಬೇಕು. ಮಳೆಗಾಲ ಹಿನ್ನೆಲೆಯಲ್ಲಿ ಡೆಂಗೆ ಜೊತೆಗೆ ಬೇರೆ ಬೇರೆ ಕಾಯಿಲೆಗಳು ಉಲ್ಬಣಿಸುತ್ತಿದ್ದು ಬೇರೆ ಬೇರೆ ಕಾಯಿಲೆಯಿಂದ ಬಳಲಿ ಸಾರ್ವಜನಿಕರು ಆಸ್ಪತ್ರೆಗೆ ಬಂದಲ್ಲಿ ಬೆಡ್ ಭರ್ತಿ ನೆಪದಲ್ಲಿ ಯಾರನ್ನು ವಾಪಾಸು ಕಳಿಸಬಾರದು ಎಂದರು.

ಜನಸ್ಪಂದನ ಅರ್ಜಿಗಳ ವಿಲೇಗೆ ಕ್ರಮ ವಹಿಸಿ: ಅಧಿವೇಶನ ಮುಗಿದ ಬಳಿಕ ಎಲ್ಲ ಜಿಲ್ಲೆಗಳಲ್ಲಿ ಪುನಃ ಜನಸ್ಪಂದನಮ ಕಾರ್ಯಕ್ರಮ ಮಾಡಲು ಸಿಎಂ ಸೂಚನೆ ನೀಡಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ ಈಗಾಗಲೇ ಎಲ್ಲಾ ಕಡೆಗಳಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆಸಲಾಗಿದೆ. ಅಲ್ಲಿ ಸ್ವೀಕೃತಿಯಾದ ಅರ್ಜಿಗಳು ಸಕಾರಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ವಿಲೇವಾರಿ ಆಗುವ ನಿಟ್ಟಿನಲ್ಲಿ ಅಧಿಕಾರಿಗಳು ತುರ್ತಾಗಿ ಕ್ರಮ ವಹಿಸಬೇಕು ಎಂದು ಡಿಸಿ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಮಾಹಿತಿ ನೀಡಿ: ಅಂಗನವಾಡಿಗಳಿಗೆ ಜಮೀನು ಇಲ್ಲ, ನಿವೇಶನ ಇಲ್ಲ. ಗ್ರಾಮದಲ್ಲಿ ಸ್ಮಶಾನಕ್ಕೆ ಜಮೀನಿಲ್ಲ ಎನ್ನುವಂತಹ ಬೇಡಿಕೆಗಳು, ಮನವಿಗಳು ಜನಸ್ಪಂದನದಂತಹ ಸಭೆಗಳಲ್ಲಿ ಮತ್ತೆ ಮತ್ತೆ ಬರುತ್ತವೆ. ಜಮೀನು ಬೇಕು ಎಂದು ತಾಲೂಕುಮಟ್ಟದಲ್ಲಿನ ಸಿಡಿಪಿಓ ಮತ್ತು ಇನ್ನಿತರ ಇಲಾಖೆಯ ಅಧಿಕಾರಿಗಳು ಒಂದು ಪತ್ರ ಬರೆದು ಸುಮ್ಮನೆ ಕೂಡಬಾರದು. ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ನಿವೇಶನ, ಜಮೀನು ಮಂಜೂರಾತಿಗೆ ಅಗತ್ಯ ಕ್ರಮವಹಿಸಲು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಇನ್ನಿತರೆ ಇಲಾಖೆಯ ಅಧಿಕಾರಿಗಳು ಗಮನ ಹರಿಸಬೇಕು ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಸೂಚನೆ ನೀಡಿದರು.

ಪಶುಪಾಲನೆ ಇಲಾಖೆಗೆ ಸೂಚನೆ: ಸಂಚಾರಿ ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಬೇಕು ಎಂದು ಕಟ್ಟುನಿಟ್ಟಿನ ನಿರ್ದೇಶನವಿದೆ. ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು. ಕುರಿ ಮೇಕೆಗಳಿಗೆ ತೊಂದರೆಯಾದಲ್ಲಿ ವಿಳಂಬ ಮಾಡದೇ ಕುರಿ ಮೇಕೆಗಳಿರುವಲ್ಲಿಗೆ ತೆರಳಿ ಲಸಿಕೆ ಮತ್ತು ಚುಚ್ಚುಮದ್ದು ಕೊಡಬೇಕು. ಕುರಿ ಕಳ್ಳತನ ತಡೆಯಲು ಬಂದೂಕು ಲೈಸೆನ್ಸ್ ನೀಡಬೇಕು ಎನ್ನುವ ಮನವಿಗೆ ಕೂಡಲೇ ಸ್ಪಂದಿಸಬೇಕು ಎಂದು ಜಿಲ್ಲಾಧಿಕಾರಿಗಳು ಪಶುಪಾಲನಾ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಸಿಇಓ ಎನ್.ಎಮ್ ಅಲಿ ಅಕ್ರಮ ಶಾ, ಅಪರ ಜಿಲ್ಲಾಧಿಕಾರಿ ಅನುರಾಧ ಜಿ., ಉಪ ಅರಣ್ಯ ಸಂರಕ್ಷಣಾಧಿಕಾರಿ ಅರ್ಸಲನ್, ಸಹಾಯಕ ಆಯುಕ್ತರಾದ ಚಿದಾನಂದ ಗುರುಸ್ವಾಮಿ, ನಗರಸಭೆ ಪೌರಾಯುಕ್ತರಾದ ಮನೋಹರ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು, ತಹಸೀಲ್ದಾರರು ಇದ್ದರು.

# ಹಂಪಾಪಟ್ಟಣದಲ್ಲಿ ಮಳೆಗಾಗಿ ಶರಣ ಬಸವೇಶ್ವರರ ಮೊರೆಹೋದ ರೈತರು



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ತಾಲೂಕಿನಲ್ಲಿ ಸಂಪೂರ್ಣವಾಗಿ ಉತ್ತಮ ಮಳೆಯಾಗಿದ್ದು ಕಂಡುಬಂದಿಲ್ಲ, ಒಂದುಕಡೆಯಾದರೆ ಮತ್ತೊಂದು ಕಡೆ ಇಲ್ಲ, ಇಂತಹ ಪರಿಸ್ಥಿತಿಯಲ್ಲಿ, ರೈತರು ಮಳೆರಾಯನಿಗಾಗಿ ನಾನಾ ರೀತಿಯಲ್ಲಿ ಪೂಜೆ ಪುನಸ್ಕಾರಗಳನ್ನು ಕೈಗೊಂಡಿದ್ದಾರೆ. ಅಂತಹದೇ ಒಂದು ಶ್ರೀ ಶರಣ ಬಸವೇಶ್ವರರ ಪೂಜೆ ತಾಲೂಕಿನ ಹಂಪಾಪಟ್ಟಣದಲ್ಲಿ ಜರುಗಿದೆ.

ಮಳೆಗಾಲ ಆರಂಭವಾಗುತ್ತಿದಂತೆ ಮೊದಲ ಮತ್ತು ಎರಡನೇ ನಕ್ಷತ್ರಗಳಿಂದ ಕೂಡಿದ ಮಳೆಯು ಉತ್ತಮವಾಗಿ ತಾಲೂಕಿನೆಲ್ಲೆಡೆಯಾಗಿದ್ದು, ರೈತರ ಮೊಗದಲ್ಲಿ ನಗು ಕಂಡುಬಂದಿತು. ಈ ಹಿನ್ನೆಲೆಯಲ್ಲಿ ತಾಲೂಕಿನೆಲ್ಲಡೆ ರೈತರು ಸಾಲಸೋಲಮಾಡಿ ಬೀಜ ಗೊಬ್ಬರಗಳನ್ನು ತಂದು ಬಿತ್ತಿದರು. ಬಳಿಕ ಸುಮಾರು ಒಂದುವರೆ ತಿಂಗಳಿನಿಂದ ಮಳೆ ಕಣ್ಣು ಮುಚ್ಚಾಲೆ ಮಾಡುತ್ತಿದೆ. ಕೆಲ ದಿನಗಳು ಮಳೆಯಾಗದೆ ಬಿಸಿಲು ಸುರಿಯಿತು. ಈಗ ಮೋಡ ಮುಸುಕಿದೆ, ಮಳೆ ಇಲ್ಲ. ಒಂದೊಂದು ಕಡೆ ಕೆಲ ನಿಮಿಷಗಳು ಜಿಟಿಜಿಟಿ ಮಳೆಯಾದರೆ, ಹಸನಾಗಿ ಭೂಮಿ ಸಂಪೂರ್ಣ ತೇವಾಂಶವಿಲ್ಲದೆ. ಬೆಳೆಗಳು ಕಮರುತ್ತಿವೆ. ಇಂತಹ ಪರಿಸ್ಥಿತಿಯನ್ನರಿತ ರೈತರು, ಕೆಲ ಕಡೆ ಮಳೆಗಾಗಿ ಕಪ್ಪೆಗಳ ಮದುವೆ ಇನ್ನು ಕೆಲ ಕಡೆ ಕತ್ತೆಗಳ ಮದುವೆ. ಸಣ್ಣ ಮಕ್ಕಳಿಂದ >>4

> ಮಳೆಗಾಲದಲ್ಲಿ ಮಳೆ ಕೈಕೊಟ್ಟರೆ ನಂಬಿಕೆಯಂತೆ ಗ್ರಾಮದಲ್ಲಿ ಗುರು ಹಿರಿಯರ ಮಾರ್ಗದರ್ಶನದಂತೆ, ಯುವಕರು ಸೇರಿ, ಶ್ರೀಶರಣ ಬಸವೇಶ್ವರರ ಪೂಜೆ ಕೈಗೊಳ್ಳುತ್ತೇವೆ. ಬೆಳಗ್ಗೆಯಿಂದ ಸಂಜೆಯವರೆಗೂ ಈ ಪೂಜೆ ನಡೆಯುತ್ತದೆ. ಬಳಿಕ ಬಹುತೇಕ ಉತ್ತಮ ಮಳೆಯಾಗಿದ್ದು ಇದೆ. ಭಗವಂತನಲ್ಲಿ ನಂಬಿಕೆ ಇದ್ದರೆ, ಶ್ರದ್ಧಾಭಕ್ತಿಯಿಂದ ಪೂಜೆ ನಡೆದರೆ, ಉತ್ತಮ ಮಳೆ ಹಾಗೂ ಬೆಳೆಯಾಗುವುದರಲ್ಲಿ ಅನುಮಾನವೇ ಬೇಡ.
>
> **– ಎಚ್.ಶಿವಾನಂದ.**
>
> ಸೇವಾ ಟ್ರಸ್ಟ್‌ನ ಮುಖಂಡ. ಹಂಪಾಪಟ್ಟಣ

**ಕವಿ ಮನಸು**

## ಬಡಮಕ್ಕಳು



ಕೂಲಿ ಕಾರ್ಮಿಕರ ಮಕ್ಕಳು ನಾವು
ಬಯಲಲ್ಲೇ ಜೀವನವ ಕಳೆಯುವೆವು
ಜಲ್ಲಿ ಕಲ್ಲುಗಳೆಮಗೆ ಆಟಿಕೆ ಆಗಿಹವು
ಬಗೆಬಗೆ ತಿಂಡಿಯ ಕನಸ ಕಾಣುವೆವು


ಹಿಡಿದಿರುವೆ ಕೈಯಲ್ಲಿ ಸುತ್ತಿಗೆ
ತುಂಬುವುದೇ ನಮ್ಮಯ ಜೋಳಿಗೆ
ಪರಿಹಾರವೇನು ನಮ್ಮಯ ಹಸಿವಿಗೆ
ಸಿಗುವುದೆಂದು ಊಟ ಹೊಟ್ಟೆಗೆ

ಅಮ್ಮನು ಇನ್ನೂ ಬಂದಿಲ್ಲ
ಅರೆಬರೆ ಬಟ್ಟೆ ನಮಗೆಲ್ಲ
ಸಹೋದರನ ದುಃಖಕ್ಕೆ ಕೊನೆಯಿಲ್ಲ
ಮಾಡುವುದೇನೆಂದು ತಿಳಿದಿಲ್ಲ

ತೈಲವ ಕಾಣದ ಕೆದರಿದೆ ಕೂದಲುಗಳು
ಪ್ರೀತಿಯ ದೊರಕದೆ ಬತ್ತಿದೆ ಕಂಗಳು
ಬಡತನವೇ ನಮಗೊಂದು ಶಾಪ
ತಪ್ಪೇ ಮಾಡದೆ ಅನುಭವಿಸಬೇಕಾಗಿದೆ ಪಾಪ

– ಚೇತನ ಭಾರ್ಗವ ಬೆಂಗಳೂರು

## ಒಲವಿನ ಒಡತಿ



ಗಲ್ ಗಲ್ ಎನ್ನುವ ಬಳೆಗಳ ನಾದ
ಮುತ್ತಿನ ಜುಮುಕಿ ಮಾಡುತ್ತಿದೆ
ಗಾಳಿಯೊಂದಿಗೆ ವಾದ
ನೀನಲ್ಲವೇ ಕೃಷ್ಣನ ಹೃದಯದ ಅರಸಿ ರಾಧ
ನಿನ್ನೊಂದಿಗಿನ ಪ್ರತಿ ಕ್ಷಣ ಹೆಚ್ಚಿಸುತ್ತಿದೆ
ಪ್ರೀತಿಯ ಸ್ವಾದ.

ಮುಗಿಲಿನ ಮೋಡದಂತೆ ಹಗುರಾಗಿದೆ
ಮನಸ್ಸು
ನೀನೇ ಅಲ್ಲವೇ ನಾ ಕಂಡ ಹಲವು ದಿನಗಳ
ಕನಸ್ಸು
ನಿನ್ನ ಆಗಮನದಿಂದ ಆಸೆಗಳೆಲ್ಲ ಈಗ ನನಸು
ನೀ ನಿಲ್ಲದೆ ಈ ಬಾಳಿಗಿಲ್ಲ ಕಿಂಚಿತ್ತೂ
ಸೊಗಸು.

ಆಕಾಶದಲ್ಲಿ ಹಾರುವ ಗಾಳಿಪಟ
ಹೇಳಿದೆ ಜೀವನದ ಪಾಠ
ಪ್ರೀತಿ, ನಂಬಿಕೆಯಿಲ್ಲದ ಸಂಸಾರ ಪುಟ
ಸೂತ್ರದ ಬಂಧನವನ್ನು ಕಳೆದುಕೊಂಡ ಪಟ.

ನೀ ಇರಲು ಜೊತೆಯಲ್ಲಿ ಬಾಳೆಲ್ಲ
ಜಯಿಸುವೆ
ನಿನ್ನ ಸನಿಹವನ್ನಷ್ಟೇ ಬಯಸುವೆ
ನನ್ನ ಅರಸಿ ನಿನ್ನನ್ನು ಮನದಲ್ಲಿ ಹೊತ್ತು
ಮೆರೆಸುವೆ
ನೀ ಎನ್ನ ಒಲವಿನ ಒಡತಿ ಸದಾ ಸಲಹುವೇ.

– ಮಂಜುಶ್ರೀ ಮುರಳೀಧರ್

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join for to Get Daily E-paper

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ. ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಢ । ಸಂವತ್ಸರ: ಕ್ರೋಧಿ

**16–07–2024 – ಮಂಗಳವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ವಿಶಾಖ |
| ಯೋಗ | : ಸಾಧ್ಯ |
| ಕರಣ | : ತೈತುಲ |
| ಸೂರ್ಯೋದಯ | : 05:51:58 |
| ಸೂರ್ಯಾಸ್ತ | : 19:14:00 |
| ರಾಹು | : 15:53–17:34 |
| ಯಮಘಂಡ | : 09:12–10:53 |
| ಗುಳಿಕ | : 12:33–14:13 |

## ತುಂಗಭದ್ರಾ ನೀರಿನ ಮಟ್ಟ




**ಸೋಮವಾರ : 15–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1607.59 ಅಡಿ |
| ಒಳ ಹರಿವು | 16142 ಕ್ಯುಸೆಕ್ |
| ಹೊರ ಹರಿವು | 211 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 33.074 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1587.43 ಅಡಿ |
| ಒಳ ಹರಿವು | 8918 ಕ್ಯುಸೆಕ್ |
| ಹೊರ ಹರಿವು | 256 ಕ್ಯುಸೆಕ್ |
| ಸಾಮರ್ಥ್ಯ | 9.018 ಟಿಎಂಸಿ |

# ಅಭ್ಯಾಸ ಬದಲಾದರೆ ಆರೋಗ್ಯ ಉತ್ತಮ

## ಕ್ಯಾನ್ಸರ್‌ಗೆ ಹೊಸಪೇಟೆಯಲ್ಲಿ ಚಿಕಿತ್ಸೆ ಲಭ್ಯ | ಕಾಯಿಲೆಗೆ ಭಯ ಪಡಬೇಕಿಲ್ಲ ಚಿಕಿತ್ಸೆ ಪಡೆಯಿರಿ | ಸಿಟಿ ಆಸ್ಪತ್ರೆಯ ಡಾ. ಸಾಲಿಯಾ ಧರ್ಮಾಯಾತ್ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**

ನಗರದಲ್ಲಿ ಇಬ್ಬರು ಕ್ಯಾನ್ಸರ್ ಶಸ್ತ್ರ ಚಿಕಿತ್ಸಕರಿಂದ ದೊಡ್ಡ ಪಟ್ಟಣಗಳಿಗೆ ಹೋಲಿಕೆ ಮಾಡಿಕೊಂಡಾಗ ಕಡಿಮೆ ವೆಚ್ಚದಲ್ಲಿ ಉತ್ತಮ ಚಿಕಿತ್ಸೆ ನೀಡುತ್ತಿದ್ದು, ಹೊಸಪೇಟೆ ನಗರಕ್ಕೆ ದೊಡ್ಡ ಪಟ್ಟಣಗಳಿಂದಲೂ ಬಂದು ತೋರಿಸಿಕೊಳ್ಳುತ್ತಿದ್ದಾರೆ. ಈ ಭಾಗದ ಜನರಲ್ಲಿ ಕ್ಯಾನ್ಸರ್ ಗುಣಲಕ್ಷಣಗಳು ಕಾಣಿಸಿಕೊಂಡಿದ್ದರೆ, ಆರಂಭದಲ್ಲೆ ತಪಾಸಣೆಗೊಳಗಾಗಿ ಅಗತ್ಯವಿದ್ದಲ್ಲಿ ಸೂಕ್ತ ಚಿಕಿತ್ಸೆ ಪಡೆದು ಬಹುಕಾಲ ಜೀವಿಸಬೇಕು ಎಂದು ಸಿಟಿ ಆಸ್ಪತ್ರೆಯ ಡಾ. ಸಾಲಿಯಾ ಧರ್ಮಾಯಾತ್ ಹೇಳಿದರು.

ನಗರದ ಸಿಟಿ ಆಸ್ಪತ್ರೆಯಲ್ಲಿ ಹುಬ್ಬಳ್ಳಿಯ ಹೆಚ್.ಸಿ.ಜಿ. ಎನ್‌ಎಂಆರ್ ಕ್ಯಾನ್ಸರ್ ಸೆಂಟರ್, ಕೆ.ಎಸ್.ಸಿ.ಎ.ಎಸ್.ಐ ವಿಜಯನಗರ ಶಾಖೆ ಹಾಗೂ ಹೊಸಪೇಟೆಯ ಐಎಂಎ ಸಹಯೋಗದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಚಿತ ಕ್ಯಾನ್ಸರ್ ತಪಾಸಣೆ ಶಿಬಿರದಲ್ಲಿ ಮಾತನಾಡಿದರು. ಕ್ಯಾನ್ಸರ್ ಕಾಯಿಲೆ ಚಿಕಿತ್ಸೆಗಾಗಿ ಈ ಭಾಗದಿಂದ ಲಕ್ಷಾಂತರ ರೂಗಳನ್ನು ಖರ್ಚುಮಾಡಿಕೊಂಡು ದೂರದ ಪಟ್ಟಣಗಳಿಗೆ ಹೋಗುತ್ತಿದ್ದ ಆ ದಿನಗಳು ಈಗ ದೂರಾಗಿವೆ. ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಇಬ್ಬರು ವೈದ್ಯರಿಂದ ನಗರದಲ್ಲೆ ಚಿಕಿತ್ಸೆ ದೊರೆಯುತ್ತಿದೆ. ಆರಂಭದಲ್ಲೆ ರೋಗ ಲಕ್ಷಣಗಳು ಪತ್ತೆಯಾದರೆ ಸಂಪೂರ್ಣ ಗುಣಮುಖರನ್ನಾಗಿಸಲು ಸಾಧ್ಯವಿದೆ. ಅದಕ್ಕಾಗಿ ಸಿಟಿ ಆಸ್ಪತ್ರೆ 2007 ರಿಂದ ನಿರಂತರವಾಗಿ ನಾನಾ ಉಚಿತ ತಪಸಾಣ ಶಿಬಿರಗಳನ್ನು ಆಯೋಜಿಸುತ್ತಾ ಬಂದಿದೆ. ಆದರೆ ಜನರು ಉಚಿತ ತಪಾಸಣೆಯಲ್ಲಿ ಪಾಲ್ಗೊಳ್ಳುವುದಕ್ಕಿಂತ ಉಚಿತ ಪ್ರಯಾಣಕ್ಕೆ ಆದ್ಯತೆ ನೀಡುತ್ತಿರುವುದು ವಿಷಾದದ ಸಂಗತಿ. ಕ್ಯಾನ್ಸರ್ ಬಗ್ಗೆ ನಿರ್ಲಕ್ಷ್ಯ ಬೇಡ ಮುಂಜಾಗ್ರತೆವಹಿಸಿ ಎಂದರು.

ಸರ್ಜಿಕಲ್ ಆಂಕೋಲಾಜಿಸ್ಟ್ ಡಾ.ಪ್ರವೀಣ್ ಮಾತನಾಡಿ, ಭಾರತದಲ್ಲಿ ದುಶ್ಚಟಗಳಿಗೆ ಸಿಲುಕಿ ಕ್ಯಾನ್ಸರ್‌ಗೆ ತುತ್ತಾಗಿ ಪ್ರತಿ ವರ್ಷ ಸಾವಿಗೀಡಾಗುವವರ ಸಂಖ್ಯೆ 1.50 ಲಕ್ಷಕ್ಕೇರಿದೆ. ಆರೋಗ್ಯದಿಂದ ಮಾತ್ರ ದೇಶದ ಪ್ರಗತಿ ಕಾಣಬಹುದು. ಯುವಜನಾಂಗ ತಂಬಾಕು ಸೇವನೆಯಿಂದ ಬಾಯಿ ಹುಣ್ಣು, ಮುಖ, ಕುತ್ತಿಗೆ ಕ್ಯಾನ್ಸ್‌ರ್‌ಗಳಿಗೆ ತುತ್ತಾಗುತ್ತಿದ್ದಾರೆ. ಮಹಿಳೆಯರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಸ್ತನ ಹಾಗೂ ಗರ್ಭಕಂಟಕ ಕ್ಯಾನ್ಸರ್‌ನ ಗುಣಲಕ್ಷಣಗಳನ್ನು ಪತಿ ಅಥವ ಪೋಷಕರೊಂದಿಗೆ ಹಂಚಿಕೊಳ್ಳಲು ಹಿಂಜರಿಯಬಾರದು. ಮೊದಲ ಅಥವಾ ಎರಡನೇ ಹಂತದಲ್ಲಿರುವ ಕ್ಯಾನ್ಸರ್‌ನ್ನು ಚಿಕಿತ್ಸೆಯಿಂದ ಗುಣಪಡಿಸಬಹುದಾಗಿದೆ. ಮೂರು ಮತ್ತು ನಾಲ್ಕನೆ ಹಂತದಲ್ಲಿ ಚಿಕಿತ್ಸೆಗೊಳಗಾದರೆ ಕಣ್ಣೀರಿಟ್ಟರೂ ಪ್ರಯೋಜನವಾಗಲಾರದು. ವೈದ್ಯರು ಹಮ್ಮಿಕೊಳ್ಳುವ ಉಚಿತ ತಪಾಸಣೆ ಶಿಬಿರದಲ್ಲಿ ಭಾಗವಹಿಸಲು ಹಿಂಜರಿಯಬಾರದು. ನಮ್ಮ ಆರೋಗ್ಯ ನಮ್ಮ ಕೈಯಲ್ಲಿದೆ. ತಾತ್ಕಾಲಿಕ ನೋವು ನಿವಾರಣೆಗಾಗಿ ಮಾತ್ರೆಗಳಿಗೆ ಮೊರೆಹೋಗುವುದಕ್ಕಿಂತ ತಜ್ಞ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದರೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದರು.

ಮೆಡಿಕಲ್ ಆಂಕೋಲಾಜಿಸ್ಟ್ ಡಾ.ಶೇಷಗಿರಿ ಮಾತನಾಡಿ, ಮೂರ್‍ನಾಲ್ಕು ದಶಕಗಳ ಹಿಂದೆ ಕ್ಯಾನ್ಸರ್ ಚಿಕಿತ್ಸೆಗೆ ಭಾರಿ ವೆಚ್ಚ ತಗುಲುತ್ತಿತ್ತು. ಈಗ ಕ್ಯಾನ್ಸರ್ ಇದ್ದರೆ ಆತಂಕ ಪಡಬೇಕಿಲ್ಲ. ಆರಂಭದಲ್ಲೇ ಚಿಕಿತ್ಸೆಗೊಳಗಾದವರು ಕಡಿಮೆ ಖರ್ಚಿನಲ್ಲಿ ಶೇ.99ರಷ್ಟು ಗುಣಮುಖರಾಗಿದ್ದಾರೆ ಎಂದರು.

ಶಸ್ತ್ರ ಚಿಕಿತ್ಸಕರಾದ ಡಾ.ನಾಜ್ ಜಹಾನ್ ಶೇಖ್ ಮಾತನಾಡಿ, ಕ್ಯಾನ್ಸರ್ ತಡೆಗೆ ಅರಿವು ಅಗತ್ಯ. ಉಚಿತ ತಪಾಸಣೆ ಶಿಬಿರಗಳಲ್ಲಿ ವೈದ್ಯರು ನೀಡುವ ಸಲಹೆಗಳನ್ನು ಪಾಲಿಸಿ, ಅರಿವು ಹೆಚ್ಚಿಸಿಕೊಳ್ಳಬೇಕು ಎಂದರು.

ಶಸ್ತ್ರ ಚಿಕಿತ್ಸಕ ಡಾ.ಸುಧೀಂದ್ರ ರಾವ್ ಮತ್ತು ಹೊಸಪೇಟೆ ಐ.ಎಂ.ಎ. ಕಾರ್ಯದರ್ಶಿ ಡಾ. ರಾಜು ಇದ್ದರು. ನಂತರ ಅನೇಕ ಜನ ಉಚಿತ ತಪಾಸಣೆಗೊಳಗಾಗಿ ವೈದ್ಯರಿಂದ ಸಲಹೆ, ಚಿಕಿತ್ಸೆ ಪಡೆದರು.



# ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಚಿತ್ತ ಹಂಪಿ ಟೈಮ್ಸ್ ಮಾರ್ಗದರ್ಶಿಯತ್ತ



ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲೂಕಿನ ಸೂಲದಹಳ್ಳಿ ಸರ್ಕಾರಿ ಪ್ರೌಢಶಾಲೆಯಲ್ಲಿ ವಿದ್ಯಾರ್ಥಿಗಳು ಹಂಪಿ ಟೈಮ್ಸ್ ಮಾರ್ಗದರ್ಶಿಯ ಪ್ರಶ್ನೋತ್ತರಗಳನ್ನ ನಿರಂತರ ಅಭ್ಯಾಸಕ್ಕಾಗಿ ನೋಟ್ಸ್ ಬರೆದುಕೊಳ್ಳುತ್ತಿರುವುದು.



# ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಇಂಗ್ಲಿಷ್ ವಿಜ್ಞಾನ ಶಿಕ್ಷಕರ ಸಭೆ



**ಹಂಪಿ ಟೈಮ್ಸ್ ಹೂವಿನ ಹಡಗಲಿ**

ಪ್ರಸಕ್ತ ಸಾಲಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಶಿಕ್ಷಕರು ಈಗಿನಿಂದಲೇ ಸೂಕ್ತ ಸಿದ್ಧತೆಯೊಂದಿಗೆ ಕಾರ್ಯಪ್ರವೃತ್ತರಾಗಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ವಿ ಪೂಜಾರ ಹೇಳಿದರು. ಪಟ್ಟಣದ ಸೊಪ್ಪಿನ ಕಾಳಮ್ಮ ಪ್ರೌಢಶಾಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಸೋಮವಾರ ಆಯೋಜಿಸಿದ್ದ ಇಂಗ್ಲಿಷ್ ವಿಜ್ಞಾನ ವಿಷಯ ಶಿಕ್ಷಕರ ಸಭೆಯಲ್ಲಿ ಅವರು ಮಾತನಾಡಿದರು.

**ಘಟಕ ಪರೀಕ್ಷೆ:** ಹತ್ತನೇ ತರಗತಿ ಪ್ರತಿ ಪಾಠದ ಘಟಕ ಪರೀಕ್ಷೆ ನಡೆಸಬೇಕು. ಅದರಲ್ಲಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ತಿಳಿಸಿದರು.

ವಿಶೇಷ ತರಗತಿ: ಬೆಳಿಗ್ಗೆ ಹತ್ತನೇ ತರಗತಿ ವಿಶೇಷ ತರಗತಿಗಳನ್ನು ಕಡ್ಡಾಯವಾಗಿ ನಡೆಸಬೇಕು. ಸಂಜೆ ಗುಂಪು ಅಧ್ಯಯನ ಸಂವಾದ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಹೇಳಿದರು.

ರಸಪ್ರಶ್ನೆ: ಪ್ರತಿ ವಾರವೂ ವಿಷಯವಾರು ಪಾಠಕ್ಕೆ ಪೂರಕವಾಗಿ ರಸಪ್ರಶ್ನೆ ಕಾರ್ಯಕ್ರಮ ನಡೆಸುವುದು. ಒಂದು, ಎರಡು ಅಂಕಗಳು ಸುಲಭವಾಗಿ ತೆಗೆಯಲು ಪೂರಕವಾದ ಪ್ರಶ್ನೆಗಳನ್ನು ಹೆಚ್ಚು ಕೇಳಬೇಕು ಎಂದರು. ಇಂಗ್ಲಿಷ್ ವಿಷಯದಲ್ಲಿ ಪತ್ರ, ಪ್ರಬಂಧ, ಪ್ಯಾಸೇಜ್, ಪ್ರೊಫೈಲ್ ರೈಟಿಂಗ್ ಮೊದಲಾದ ವ್ಯಾಕರಣದ ಅಂಶಗಳನ್ನು ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಕಲಿಕೆಯಲ್ಲಿ ಆಸಕ್ತಿ ಮೂಡಿಸಿರಿ ಎಂದು ಹೇಳಿದರು. ವಿಜ್ಞಾನದಲ್ಲಿ 14–16 ಅಂಕಗಳು ಬರುವ ಎಲ್ಲಾ ಚಿತ್ರಗಳನ್ನು ಈಗಿನಿಂದಲೇ ಬಿಡಿಸಲು ಸೂಕ್ತ ಮಾರ್ಗದರ್ಶನ ನೀಡಬೇಕು. ವಿಜ್ಞಾನದಲ್ಲಿ ಖಚಿತವಾಗಿ ಕೇಳುವ ಪಾಠಗಳಿಗೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದರು. ಇಂಗ್ಲಿಷ್ ವಿಜ್ಞಾನ ಶಿಕ್ಷಕರ ಜೊತೆ ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗಾಗಿ ಶಾಲಾ ಹಂತದಲ್ಲಿ ಕೈಗೊಂಡ ಅಂಶಗಳು ಕುರಿತು ಪ್ರತಿ ಶಾಲೆಯ ಶಿಕ್ಷಕರಿಂದ ಮಾಹಿತಿ ಪಡೆದರು. ಕ್ಷೇತ್ರ ಸಮನ್ವಯಾಧಿಕಾರಿ ಎ ಕೋಟೆಪ್ಪ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ವಿ ಹನುಮಂತಪ್ಪ, ಎಸ್ಸೆಸ್ಸೆಲ್ಸಿ ನೋಡಲ್ ಅಧಿಕಾರಿ ಎಚ್ ಮಲ್ಲಿಕಾರ್ಜುನ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ಎಂ ಶಿವಲಿಂಗಪ್ಪ, ಪ್ರಭಾರಿ ಉಪ ಪ್ರಾಂಶುಪಾಲ ವೀರಣ್ಣ ಇತರರು ಉಪಸ್ಥಿತರಿದ್ದರು. ತಾಲೂಕಿನ ಸರ್ಕಾರಿ ಅನುದಾನಿತ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಶಿಕ್ಷಕರು ಭಾಗವಹಿಸಿದ್ದರು.



# ಜು.29 ರಂದು ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ಕಾರ್ಮಿಕರ ಭವಿಷ್ಯ ಸಂಸ್ಥೆ ಬಳ್ಳಾರಿ ಪ್ರಾದೇಶಿಕ ಕಚೇರಿ ವತಿಯಿಂದ ಭವಿಷ್ಯ ನಿಧಿ ನಿಮ್ಮ ಹತ್ತಿರಕ್ಕೆ ಎಂಬ ಅಂಶದಡಿ ಜು.29 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸಂಡೂರು ತಾಲ್ಲೂಕಿನ ತೋರಣಗಲ್ಲಿನ ಎಂಡಿ ಮೂವರ್ಸ್‌ನಲ್ಲಿ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಪ್ರಾದೇಶಿಕ ಭವಿಷ್ಯ ನಿಧಿ ಬಳ್ಳಾರಿ ಪ್ರಾದೇಶಿಕ ಕಚೇರಿಯ ಆಯುಕ್ತ ಕೆ.ವೆಂಕಟ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಕಾರ್ಮಿಕರ, ಪಿಂಚಣಿದಾರರ ಮತ್ತು ಉದ್ಯೋಗ ದಾತರರ ಕುಂದು ಕೊರತೆ ಪರಿಹಾರ, ಮಾಹಿತಿ ವಿನಿಮಯ ಮಾಡಿಕೊಳ್ಳಬಹುದು. ಉದ್ಯೋಗ ದಾತರ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಅರಿವು, ಕಾರ್ಮಿಕರಿಗೆ, ಉದ್ಯೋಗದಾತರಿಗೆ, ಪ್ರಧಾನ ಉದ್ಯೋಗದಾತರಿಗೆ ಮತ್ತು ಗುತ್ತಿಗೆ ದಾರರಿಗೆ ಲಭ್ಯವಿರುವ ಆನ್ಲೈನ್ ಸೇವೆಗಳ ಮಾಹಿತಿ, ಹೊಸ ಉಪಕ್ರಮಗಳು ಹಾಗೂ ಸುಧಾರಣೆ ಕ್ರಮಗಳ ಕುರಿತು ಮಾಹಿತಿ ಒದಗಿಸುವ ಕಾರ್ಯಕ್ರಮವಾಗಿದೆ.

ಕಾರ್ಮಿಕರು, ಪಿಂಚಣಿದಾರರು, ಉದ್ಯೋಗ ದಾತರು ಜು.29 ರಂದು ನಡೆಯುವ ನಿಧಿ ಆಪ್ಕೆ ನಿಕಟ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದ್ದಾರೆ.

# ಕೇಂದ್ರದಲ್ಲಿ ಒಬಿಸಿ ಸಿಕ್ಕರೆ ಮಕ್ಕಳಿಗೆ ಐಎಎಸ್, ಕೆಎಎಸ್ ಅಧಿಕಾರ ಸುಲಭ

## ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳು ಹೇಳಿಕೆ





**ಹಂಪಿ ಟೈಮ್ಸ್ ಕೊಟ್ಟೂರು**

ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಇಂದಲ್ಲ ನಾಳೆ ಸಿಕ್ಕೇ ಸಿಗುತ್ತೆ ಆ ವಿಶ್ವಾಸ ನಮಗಿದೆ, ಬೀದಿಯಲ್ಲಿ ಹೋರಾಟ ಮಾಡದೆ, ಬುದ್ದಿವಂತಿಕೆಯಿಂದ ಮೀಸಲಾತಿ ಪಡೆಯುತ್ತೇವೆ, ಕೇಂದ್ರದಲ್ಲಿ ಒಬಿಸಿ ಮೀಸಲಾತಿ ದೊರೆತರೆ ಐಎಎಸ್ ಮತ್ತು ಕೆಎಎಸ್ ಉನ್ನತ ಅಧಿಕಾರಗಳು ಸಮಾಜದ ಮಕ್ಕಳಿಗೆ ಸುಲಲಿತ. ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಶ್ರೀಗಳು ನುಡಿದರು.

ಪಟ್ಟಣದ ಭಾನುವಾರ ಶ್ರೀಮಹಾದೇವ ಇಂಟರ್ ನ್ಯಾಷನಲ್ ಸ್ಕೂಲ್ ನಲ್ಲಿ ವೀರಶೈವ ಲಿಂಗಾಯಿತ ಪಂಚಮಸಾಲಿ ಕೊಟ್ಟೂರು ತಾಲೂಕು ಘಟಕ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದ ಸಾನಿಧ್ಯವಹಿಸಿದ್ದ ಶ್ರೀಗಳು ಆಶೀರ್ವಚನ ನೀಡಿದರು.

ಇದು ಸ್ಪರ್ಧಾತ್ಮಕ ಪ್ರಪಂಚ, ನಾವು ಮೀಸಲಾತಿ ಪಡೆಯುತ್ತೇವೆ. ಆದರೆ ಅದಕ್ಕಾಗಿ ಕಾಯುತ್ತ ಕುಳಿತುಕೊಳ್ಳಬೇಡಿ, ಶ್ರಮಪಟ್ಟು ಓದಿ ಉನ್ನತ್ತ ವ್ಯಾಸಂಗ ಮಾಡಿ ಪ್ರಗತಿ ಸಾಧಿಸಿ ಸಮಾಜಕ್ಕೆ ಕೀರ್ತಿ ತನ್ನಿ, ಓದಿಸಲು ಕಷ್ಟವಾದಲ್ಲಿ ನಮ್ಮ ಮಠಕ್ಕೆ ನಿಮ್ಮ ಮಕ್ಕಳನ್ನು ತಂದು ಬಿಡಿ, ನಾವು ಉಚಿತವಾಗಿ ಶಿಕ್ಷಣ ನೀಡುತ್ತೇವೆ. ನಿಮಗಾಗಿ ನಮ್ಮ ಮಠವಿದೆ ಎಂದು ಅಭಯ ನೀಡಿದರು.

ಪಂಚಮಸಾಲಿ ಸಮಾಜದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ, ಓದಿ ಉನ್ನತ ಸ್ಥಾನಕ್ಕೇರಿ ಸಮಾಜಕ್ಕೆ ಗೌರವ ತನ್ನಿ, ಆದರೆ ಸಮಾಜಕ್ಕೆ ಕಳಂಕ ತರುವಂತೆ ನೀವೆಂದು ನಡೆದುಕೊಳ್ಳಬೇಡಿ ಎಂದ ಅವರು, 2004ರಲ್ಲಿ ನಮ್ಮ ಸಮಾಜದಿಂದ ಆರಂಭವಾದ ಪ್ರತಿಭಾ ಪುರಸ್ಕಾರ ಸಮಾರಂಭ ನಿರಂತರವಾಗಿ ರಾಜ್ಯದಲ್ಲಿ ನಡೆಯುತ್ತ ಬಂದಿರುವುದು ಸಮಾಜದ ಏಳ್ಗೆಯ ಸಂಕೇತ ಜೊತೆಗೆ ಇಲ್ಲಿಂದ ಸನ್ಮಾನಿತರಾದವರು ಸಮಾಜಕ್ಕೆ ಸದಾ ಗೌರವ ಹೊಂದಿರಬೇಕು ಹಾಗೆ ಇದರ ಬೆಳವಣಿಗೆಗೆ ಸಹಕಾರಿಗಳಾಗಿರಬೇಕು ಎಂದರು.

ಮಹಾದೇವ ಇಂಟರ್ ನ್ಯಾಷನಲ್ ಸ್ಕೂಲ್ ಸ್ಥಾಪಕ ಬಸಾಪುರ ಪಂಪಾಪತಿ, ಸಮಾಜದ ಬಡ ಮಕ್ಕಳ ಶಿಕ್ಷಣಕ್ಕಾಗಿ ವಿದ್ಯಾರ್ಥಿ ನಿಧಿ ಸ್ಥಾಪಿಸಲು ಸಮಾಜದ ಪ್ರಮುಖರೊಂದಿಗೆ ಚರ್ಚಿಸಲಾಗಿ ಮೊದಲಿಗೆ 5 ಲಕ್ಷ ರೂ. ಸಂಗ್ರಹಿಸುವ ಗುರಿ ಇತ್ತು. ಈಗ 10 ಲಕ್ಷ ರೂ. ಸಂಗ್ರಹಿಸಿ ನಿಧಿ ಸ್ಥಾಪಿಸಲು ತೀರ್ಮಾನಿಸಿದ್ದು, ಸಮಾಜದ ಬಂಧುಗಳು ಸಹಕಾರ ನೀಡಬೇಕೆಂದು ಕೋರಿದರು.

ವಿಜಯನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ ಚನ್ನಬಸವನಗೌಡ ಪಾಟೇಲ್ ಮಾತನಾಡಿ, ಸಮಾಜದ ಎಲ್ಲಾ ವರ್ಗಗಳೊಂದಿಗೆ ಅನ್ಯೊನ್ಯತೆ ಹಾಗೂ ಸೌಹಾರ್ಧತೆ,ಸಹಬಾಳ್ವೆನಡೆಸುತ್ತಿರುವುದು ನಮ್ಮ ಸಮಾಜದ ಗುಣ ಎಂದು ಹೇಳಿದರು.

ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಚಾಪಿ ಚಂದ್ರಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ವೇದಿಕೆಯಲ್ಲಿ ವಿಜಯನಗರ ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಪ್ರಕಾಶ ಪಾಟಿಲ್, ಚಪ್ಪರದಹಳ್ಳಿ ಕೊಟ್ರಪ್ಪ, ಸಮಾಜದ ತಾಲೂಕು ಘಟಕದ ಕಾರ್ಯದರ್ಶಿ ಎಚ್. ಆಶೋಕ, ನಿಂಬಳಗೆರೆ ಕಲ್ಲೇಶಪ್ಪ, ಹೆಚ್.ಎನ್ ವೀರಭದ್ರಪ್ಪ, ಖಾನಾವಳಿ ಶಿವಕುಮಾರ್, ಮಹಿಳಾ ಘಟಕದ ಅಧ್ಯಕ್ಷರು ಡಿ.ಉಮಾದೇವಿ ಇತರರಿದ್ದರು.

ಕೃಷಿ, ನಿವೃತ್ತ ನೌಕರರು, ವಿವಿಧ ಕ್ಷೇತ್ರದ ಸಾಧಕರು ಮತ್ತು ಎಸ್.ಎಸ್.ಎಲ್.ಸಿ. ಹಾಗೂ ಪಿಯುಸಿಯಲ್ಲಿ ಅಧಿಕ ಅಂಕಗಳಿಸಿದವರಿಗೆ ಸನ್ಮಾನಿ ಸಲಾಯಿತು. ಹುರುಳಿಹಾಳ ರೇವಣ್ಣ, ಶೆಟ್ಟಿ ರಾಜಶೇಖರ್, ಭರಮಗೌಡ, ಆಶೋಕ ಇಂಜಿನಿಯರ್, ತೂಲಹಳ್ಳಿ ಹೇಮಣ್ಣ ಸೇರಿದಂತೆ ಅನೇಕರಿದ್ದರು. ವೀರಭದ್ರಪ ಸ್ವಾಗತಿಸಿದರು, ಹಳ್ಳಿ ಆನಂದ ನಿರೂಪಿಸಿದರು, ಸಂತೋಷ ವಂದಿಸಿದರು.

# ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಳ್ಳುವಂತೆ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಪ್ರಸ್ತಕ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮುಂಗಾರು ಹಂಗಾಮಿನ ಬೆಳೆ ವಿಮೆಗೆ ನೋಂದಾಯಿಸಲು ಬೆಳೆ ಸಾಲ ಪಡೆದ ಹಾಗೂ ಬೆಳೆ ಸಾಲ ಪಡೆಯದ ರೈತರು ಬ್ಯಾಂಕುಗಳಲ್ಲಿ ವಿಮೆ ಮಾಡಿಸಿಕೊಳ್ಳಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಕೆ. ಮಲ್ಲಿಕಾರ್ಜುನ ಅವರು ತಿಳಿಸಿದ್ದಾರೆ.

ಈ ಯೋಜನೆಯಡಿ ಗ್ರಾಮ ಪಂಚಾಯಿತಿ ಮಟ್ಟದ ಬೆಳೆಗಳಾದ ಭತ್ತ, ಮುಸುಕಿನ ಜೋಳ ಹಾಗೂ ಹೋಬಳಿ ಮಟ್ಟದ ಬೆಳೆಗಳಾದ ಜೋಳ, ರಾಗಿ, ಸಜ್ಜೆ, ನವಣೆ, ತೊಗರಿ, ಹುರುಳಿ, ಸೂರ್ಯಕಾಂತಿ, ಎಳ್ಳು, ಹತ್ತಿ, ನೆಲಗಡಲೆ, ಈರುಳ್ಳಿ, ಭತ್ತ, ಕೆಂಪು ಮೆಣಸಿನಕಾಯಿ ಬೆಳೆಗಳಿಗೆ ವಿಮೆಯನ್ನು ಮಾಡಿಸಿಕೊಳ್ಳಬೇಕು.

*ಬೆಳೆ ವಿಮೆಯನ್ನು ಮಾಡಿಸಲು ವಿವಿಧ ಬೆಳೆಗಳಿಗೆ ಕೊನೆಯ ದಿನಾಂಕ ಇಂತಿವೆ:* ಮುಸುಕಿನ ಜೋಳ, ಜೋಳ, ಸೂರ್ಯಕಾಂತಿ, ತೊಗರಿ, ಹತ್ತಿ, ಕೆಂಪು ಮೆಣಸಿನಕಾಯಿ, ಈರುಳ್ಳಿ ಮತ್ತು ಎಳ್ಳು ಬೆಳೆಗಳಿಗೆ ವಿಮೆ ಮಾಡಿಸಿಕೊಳ್ಳಲು ಜುಲೈ 31 ಕೊನೆಯ ದಿನವಾಗಿದೆ.

ಭತ್ತ, ತೊಗರಿ, ರಾಗಿ, ನವಣೆ, ಹುರುಳಿ, ನೆಲಗಡಲೆ, ಸಜ್ಜೆ ಬೆಳೆಗಳಿಗೆ ವಿಮೆ ಮಾಡಿಸಲು ಆಗಸ್ಟ್ 16 ಕೊನೆಯ ದಿನ ಮತ್ತು ಎಳ್ಳು ಬೆಳೆಗೆ ವಿಮೆ ಮಾಡಲು ಜುಲೈ 15 ಕೊನೆಯ ದಿನವಾಗಿದೆ.

ಈ ಯೋಜನೆಯ ಲಾಭ ಪಡೆಯಲು ಯಾವುದೇ ಸ್ಥಳೀಯ ಬ್ಯಾಂಕ್, ಸಾಮಾನ್ಯ ಸೇವಾ ಕೇಂದ್ರ ಮತ್ತು ಗ್ರಾಮಪಂಚಾಯತ್‌ಗಳಲ್ಲಿ ಹೊಸದಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಒನ್ ಸೇವಾ ಕೇಂದ್ರ್ರಗಳಿಗೆ ಭೇಟಿ ನೀಡಬಹುದು.

ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸಮೀಪದ ರೈತ ಸಂಪರ್ಕ ಕೇಂದ್ರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಹಾಗೂ ಜಂಟಿ ಕೃಷಿ ನಿರ್ದೇಶಕರ ಕಚೇರಿಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಮಳೆಗಾಗಿ ಶರಣ ಬಸವೇಶ್ವರರ ಮೊರೆಹೋದ ರೈತರು

ಮೊರನೆ ಪುಟದಿಂದ

ಗುರ್ಜಿ ಹಾಡುವುದು ನಡೆದಿವೆ.

ಅದರಂತೆ ಹಂಪಾಪಟ್ಟಣದಲ್ಲಿ ಗ್ರಾಮದ ಶ್ರೀಶರಣ ಬಸವೇಶ್ವರ ಸೇವಾ ಹಾಗೂ ಸಾಂಸ್ಕೃತಿಕ ಟ್ರಸ್ಟ್ ಮತ್ತು ಗ್ರಾಮಸ್ಥರು ಹಾಗೂ ಯುವಕರು ಸೇರಿ, ಸೋಮವಾರ ಬೆಳಗ್ಗೆ ಮಹಾದಾಸೋಹಿ, ಮಹಾಮಹಿಮರೆಂದೆ ಕರೆಯಲ್ಪಡುವ ಕಲಬುರ್ಗಿ ಶರಣ ಬಸವೇಶ್ವರರ ಭಾವಚಿತ್ರವನ್ನು, ಗ್ರಾಮದ ಶ್ರೀಆಂಜನೇಯ ಸ್ವಾಮಿ ದೇಗುಲದ ಪಕ್ಕದಲ್ಲಿರುವ ಶ್ರೀಶರಣ ಬಸವೇಶ್ವರರ ವೇದಿಕೆಯಲ್ಲಿಟ್ಟು, ಮಡಿಯುಡಿಯಿಂದ ಪೂಜೆ ಕೈಗೊಂಡಿದ್ದಾರೆ. ಇದಕ್ಕೂ ಮೊದಲು ಒಂದುದಿನ ಮುಂಚಿತವಾಗಿ ಗ್ರಾಮದಲ್ಲಿ ಡಂಗೂರ ಹಾಕಿಸಿ ಈ ಪೂಜೆ ಕೈಗೊಳ್ಳುತ್ತಾರೆ. ಅದರಂತೆ ಗ್ರಾಮದಲ್ಲಿ ಉತ್ತಮ ಮಳೆ ಮತ್ತು ಬೆಳೆಗಾಗಿ ಈ ಒಂದು ದಿನ ಪ್ರತಿ ಮನೆಮನೆಯಲ್ಲಿ ಹಬ್ಬದ ವಾತಾವರಣ ಸೃಷ್ಠಿಯಾಗಿರುತ್ತೆ. ಇನ್ನು ಮಳೆರಾಯ ಕೃಪೆ ತೋರಬೇಕು ಅಷ್ಟೇ.

# ಹಂಪಿ ಪರಿಸರದಲ್ಲಿ ವಚನ ಸಾಹಿತ್ಯಕ್ಕೆ ಪುನರುಜ್ಜೀವನ

ಮೊದಲ ಪುಟದಿಂದ

ಕಾಲಾಂತರದಲ್ಲಿ ಲಿಂಗಾಯತ ಧರ್ಮವಾಗಿ ರೂಪಾಂತರವಾಗಿದೆ. ಬಸವಣ್ಣ ನಿರೂಪಿಸಿದ ಲಿಂಗಾಯತ ಧರ್ಮ ಸನ್ಯಾಸಿಗಳ ಮತ್ತು ಮಠಾಧೀಶರ ಧರ್ಮವಲ್ಲ, ಅದು ಸಂಸಾರಿಗಳ ಧಮ. ಕಾಯಕ ಜೀವಿಗಳ ಮನೆಗಳೇ ಮಠಗಳಾಗಿ ತಮ್ಮದೇ ಧರ್ಮವನ್ನು ಪೋಷಿಸಿಕೊಂಡು ಬಂದಿವೆ. ಈಗಲೂ ಬಸವಣ್ಣನ ಧರ್ಮ ಬೆಳೆಯಬೇಕಾದರೇ ಕಾಯಕ ನಿಷ್ಠ ಸಂಸಾರಿಗಳೇ ಅದರ ನೇತಾರಿಕೆ ವಹಿಸಿಕೊಳ್ಳಬೇಕು ಎಂದರು.

ವೇದಿಕೆ ಮೇಲೆ ಅಖಂಡ ಬಳ್ಳಾರಿ ಜಿಲ್ಲೆಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಿಷ್ಠಿ ರುದ್ರಪ್ಪ,



ರಾಯಚೂರು ಜಿಲ್ಲೆ ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ಪಿ ರುದ್ರಪ್ಪ, ಅನುಭಾವಿಗಳಾದ ಕುರಕುಂದಿ ವೀರಭದ್ರಪ್ಪ, ಹೊಸಪೇಟೆ ಬಸವ ಬಳಗದ ಅಧ್ಯಕ್ಷ ಬಸವಕಿರಣ, ಕಲಬುರ್ಗಿಯ ಶಾರದ ತಾಯಿ, ಕೊಪ್ಪಳದ ಈರಣ್ಣ, ಉಪಸ್ಥಿತರಿದ್ದರು, ಬಳ್ಳಾರಿಯ ರವಿಶಂಕರ್ ಮತ್ತು ಮಾವಿನಳ್ಳಿ ಬಸವರಾಜ ನಿರ್ವಹಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮುಂಚೆ ಷಟಸ್ಥಲ ಧ್ವಜಾ ರೋಹಣ ಮತ್ತು ಪಥ ಸಂಚಲನ್ನು ನೂರಾರು ಮಹಿಳೆಯರು ನೆರವೇರಿಸಿದರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA